ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 21 | ಮೇ 25, 1980 | ಬೆಲೆ : 50 ಪೈಸೆ

ಬಹುಗುಣ ರಾಜಿನಾಮೆ

ಬಹುಗುಣರವರು ಕಾಂಗ್ರೆಸ್ ಪಕ್ಷಕ್ಕೆ ರಾಜಿನಾಮೆ ನೀಡಿದ್ದಾರೆ ಮತ್ತು ಲೋಕಸಭಾ ಸ್ಥಾನಕ್ಕೂ ರಾಜಿನಾಮೆ ನೀಡಿದ್ದಾರೆ. ಅವರ ಜೊತೆಗೆ ಇನ್ನೂ ಕೆಲವರು ರಾಜಿನಾಮೆ ಕೊಟ್ಟಿದ್ದಾರೆಂದೂ ವರದಿಯಾಗಿದೆ. ಪಕ್ಷದಲ್ಲಿ ಆಂತರಿಕ ಜನತಂತ್ರ ಲೋಪವಾಗಿದೆಯೆಂದೂ, ಸರಕಾರದ ರೀತಿ ನೀತಿಗಳು 'ಗಾಂಧಿ-ನೆಹರೂ' ಚೌಕಟ್ಟಿನಿಂದ ದೂರ ಸರಿದಿದೆಂದೂ, ಪಕ್ಷನಿಷ್ಠೆಯ ಬದಲಾಗಿ ವ್ಯಕ್ತಿನಿಷ್ಠೆಗೆ ಹೆಚ್ಚಿನ ಮಹತ್ವ ಕೊಡಲಾಗುತ್ತಿದೆಂದೂ ಅದರಲ್ಲೂ ಮುಖ್ಯವಾಗಿ ಸಂಜಯಗಾಂಧಿಯ ಕೈವಾಡ ಹೆಚ್ಚಾಗಿದೆಂದೂ ಅವರು ಆರೋಪಿಸಿದ್ದಾರೆ. ಕೆಲವು ದಿನಗಳ ಹಿಂದೆ ಅವರು ಎಲ್ಲ ಜವಾಬ್ದಾರಿ ಸ್ಥಾನಗಳಿಗೂ ರಾಜಿನಾಮೆ ನೀಡಿ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಈಗ ಪಕ್ಷಕ್ಕೇ ರಾಜಿನಾಮೆ ನೀಡಿದ್ದಾರೆ.

ಲೋಕಸಭಾ ಚುನಾವಣೆಗೆ ಮುಂಚೆ ಅವರು ಕಾಂಗ್ರೆಸ್ ಸೇರಿದರು. ಹೊಸ ಮಂತ್ರಿಮಂಡಲದಲ್ಲಿ ಅವರಿಗೆ ಯಾವ ಸ್ಥಾನವೂ ದೊರೆಯಲಿಲ್ಲ. ಈಗ ಶಾಸನಸಭೆಗೆ ಉಮೇದುವಾರರನ್ನು ಆರಿಸಿದ ಸಂದರ್ಭದಲ್ಲೂ ಅವರ

ಸಂಪಾದಕೀಯ

ಅನುಯಾಯಿಗಳನ್ನು ಕಡೆಗಣಿಸಲಾಗಿದೆಯೆಂಬ ವರದಿಗಳು ಬಂದಿವೆ. ಇದರಿಂದ ನಿರಾಶೆಗೊಂಡ ಬಹುಗುಣರು ಕಾಂಗ್ರೆಸ್ಸಿನಿಂದ ಹೊರಬಂದಿದ್ದಾರೆ.

ಕಾಂಗ್ರೆಸ್ಸಿನಲ್ಲಿ ಜನತಂತ್ರವಿದೆಂದು ಯಾರು ತಾನೇ ನಂಬಲು ಸಾಧ್ಯ? ಪ್ರಜಾಪ್ರಭುತ್ವದಲ್ಲಿ ನಂಬಿಕೆಯೇ ಇಲ್ಲದ ಇಂದಿರಾ ಕಾಂಗ್ರೆಸ್ಸಿನವರಿಗೆ ತಮ್ಮ ಪಕ್ಷದಲ್ಲಿ ಪ್ರಜಾಪ್ರಭುತ್ವವನ್ನು ಆಚರಿಸಲು ಸಾಧ್ಯವೇ ಇಲ್ಲ. ಈಗಾಗಲೇ ಇಂದಿರಾರವರು "ಬೇರೆ ವ್ಯವಸ್ಥೆ"ಯ ಬಗ್ಗೆ ಯೋಚಿಸಬೇಕಾಗಿದೆಂದು ಹೇಳಿದ್ದಾರೆ. ಅದು ಯಾವುದೆಂದು ನಿರೀಕ್ಷಿಸುವುದು ಕಷ್ಟವೇನಲ್ಲ.

ದೇಶದಲ್ಲಿ ರಾಜಕೀಯ-ಆರ್ಥಿಕ ಬಿಕ್ಕಟ್ಟು ಆಳವಾಗುತ್ತಿರುವಾಗ ಬಂಡವಾಳಶಾಹಿ ಪಕ್ಷಗಳಲ್ಲಿ ಒಡಕು ಬರುವುದೂ, ಪಕ್ಷದೊಳಗೆ ಆಂತರಿಕ ಕಲಹಗಳು ತೀವ್ರಗೊಳ್ಳುವುದೂ ಸ್ವಾಭಾವಿಕ. ಕಾಂಗ್ರೆಸ್ಸಿನೊಳಗಿನ ಗುಂಪುಗಾರಿಕೆಯು ಎಲ್ಲ ರಾಜ್ಯಗಳಲ್ಲೂ ಅತಿರೇಕಕ್ಕೆ ಹೋಗಿದೆ. ಪಶ್ಚಿಮ ಬಂಗಾಳದಲ್ಲಿ ಎರಡು ಗುಂಪುಗಳ ಮಧ್ಯೆ ಹೊಡೆದಾಟಗಳು ನಡೆದು ಹತ್ತು ಜನ ಸತ್ತಿದ್ದಾರೆ. ಈಗಿನ ಶಾಸನಸಭಾ ಚುನಾವಣೆಗಳು ನಡೆದ ಮೇಲೂ ಸುಭದ್ರ ಸರಕಾರಗಳು ಬರುತ್ತವೆಂದಾಗಲಿ, ಕಾಂಗ್ರೆಸ್ಸಿನ ಒಳಜಗಳಗಳು ಕಡಿಮೆಯಾಗುತ್ತವೆಂಬುದಾಗಲಿ ನಿರೀಕ್ಷಿಸುವುದು ಹಗಲು ಕನಸೇ ಸರಿ.

(ಕೊನೆಯ ಪುಟ ನೋಡಿ)

ರಾಜ್ಯವ್ಯಾಪ್ತಿ ಚಳುವಳಿಗೆ ಸಿ.ಐ.ಟಿ.ಯು. ಕರೆ

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಸಭೆಯು ತಾ. 15-5-80 ರಂದು ಹರಿಹರದಲ್ಲಿ ಕಾಂ. ಎಸ್. ಸೂರ್ಯನಾರಾಯಣರಾವ್ ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಯುಗೋಸ್ಲಾವಿಯಾದ ಅಧ್ಯಕ್ಷ ಕಾಂ. ಜೆ. ಬಿ. ಟಿಟೋರವರ ನಿಧನದ ಬಗ್ಗೆ ಒಂದು ನಿಮಿಷ ನಿಂತು ಸಭೆಯು ಮೌನವನ್ನಾಚರಿಸಿ ಸಂತಾಪಸೂಚಕ ನಿರ್ಣಯವನ್ನು ಅಂಗೀಕರಿಸಿತು.

ಬೆಂಗಳೂರಿನ ಐ. ಟಿ. ಸಿ. ಕಾರ್ಮಿಕರ ಮುಷ್ಕರವನ್ನು ನಿಷೇಧಿಸಿದ್ದು, ಮುಖ್ಯ ಮಂತ್ರಿಯವರ ನಿವಾಸದ ಮುಂದೆ ಪ್ರದರ್ಶನ ನಡೆಸಲು ಹೋದ ದೇವಿಕಾರಾಣಿರೋರಿಚ್ ಒಡೆತನದ ತಾತಗುಣಿ ಎಸ್ಟೇಟಿನ ಕಾರ್ಮಿಕರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದು, ಬೆಂಗಳೂರು ಮತ್ತು ಬೆಳಗಾವಿಗಳಲ್ಲಿ ಸಾಧಾರಣ ಟ್ರೇಡ್‌ಯೂನಿಯನ್ ಚಟುವಟಿಕೆಗಳನ್ನು ಮೊಟಕು ಮಾಡಲು ನಿಷೇದಾಜ್ಞೆಯನ್ನು ಹೇರಿದುದು, ತಮಗೆಯಿರುವ ಅಧಿಕಾರವನ್ನು ಉಪಯೋಗಿಸಿ ತಮ್ಮ ಬಾಲಬಡಿಯುವ ಐ ಎನ್ ಟಿ.ಯು.ಸಿ. ಸಂಘಗಳನ್ನು ಬಿಟ್ಟು ಇತರ ಎಲ್ಲಾ ಕಾರ್ಮಿಕ ಸಂಘಗಳ ಮೇಲೆ ದಾಳಿ ನಡೆಸಲು, ಗೂಂಡಾಗಿರಿ ನಡೆಸಲು ಪ್ರಚೋದಿಸುವ, ಮಾಲೀಕರ ಪರವಾದ ಮತ್ತು ಕಾರ್ಮಿಕ ವಿರೋಧಿಯಾದ ಮಾತುಗಳನ್ನು ಮಂಗಳೂರಿನಲ್ಲಿ ನಡೆದ ಐ.ಎನ್ ಟಿ.ಯು.ಸಿ. ಸಮ್ಮೇಳನದಲ್ಲಿ ಶ್ರೀ ಎಫ್. ಎಂ. ಖಾನ್ ಮತ್ತು ಶ್ರೀ ಸಿ. ಎಂ. ಇಬ್ರಾಹಿಂ ಆಡಿರುವುದು ಮೊದಲಾದ ಬೆಳವಣಿಗೆಗಳನ್ನು ಪರಿಶೀಲಿಸಿದ ಸಭೆಯು ಇದೇ 30ರಂದು ಸಿ.ಐ.ಟಿ.ಯು.ವಿನ ಹತ್ತನೇ ವಾರ್ಷಿಕೋತ್ಸವವನ್ನು ಆಚರಿಸುವಾಗ 1) ಅಗತ್ಯ ಸೇವೆಗಳೆಂದು ಕರೆಯಲ್ಪಡುವ ಕೈಗಾರಿಕೆಗಳಲ್ಲಿ ಮುಷ್ಕರಗಳನ್ನು ನಿಷೇಧಿಸುವ ಕಾರ್ಮಿಕ - ವಿರೋಧಿ ಮಸೂದೆಯನ್ನು ಕೈಬಿಡಬೇಕೆಂದು ಒತ್ತಾಯಪಡಿಸಲು. 2) ಕೈಗಾರಿಕಾ ವಿವಾದಗಳಲ್ಲಿ ಪೋಲೀಸ್ ಹಸ್ತಕ್ಷೇಪ ಮತ್ತು ಮಾಲೀಕರ ಪರವಾಗಿ ಮಧ್ಯ ಪ್ರವೇಶ ಮಾಡುವುದು ನಿಲ್ಲಬೇಕು. 3) ಕಾಂ. ಎಸ್. ಸೂರ್ಯನಾರಾಯಣರಾವ್ ಮತ್ತು ವೈಕೋ ಎಂಪ್ಲಾಯೀಸ್ ಅಸೋಸಿಯೇಷನ್‌ನ ಇತರ ಪದಾಧಿಕಾರಿಗಳನ್ನು ಗಡೀಪಾರು ಮಾಡಬೇಕೆಂದು ಉದ್ದೇಶಿಸಿರುವ ಕ್ರಮವನ್ನು ಕೈಬಿಡಬೇಕೆಂದು ಒತ್ತಾಯಪಡಿಸಲು ಸಭೆ ಮೆರವಣಿಗೆ ಪ್ರದರ್ಶನ ಇತ್ಯಾದಿ ಪ್ರಚಾರ ಕಾರ್ಯಕ್ರಮಗಳ ಮೂಲಕ ಪ್ರತಿಭಟನಾ ದಿನವನ್ನಾಗಿ ಆಚರಿಸಬೇಕೆಂದು ರಾಜ್ಯಸಮಿತಿಯು ಎಲ್ಲಾ ಕಾರ್ಮಿಕ ಸಂಘಗಳಿಗೆ ಕರೆ ಕೊಟ್ಟಿತು.

(ಕೊನೆಯ ಪುಟ ನೋಡಿ)

"ಕಾರ್ಮಿಕ - ವಿದ್ಯಾರ್ಥಿಗಳ ಐಕ್ಯ ಹೋರಾಟ"

ಬೆಳಗಾವಿಯಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ

ಈ ಮೊದಲು ಆಗೊಮ್ಮೆ ಈಗೊಮ್ಮೆ ಎಂಬಂತೆ ಭಾಷೆ ಮತ್ತು ಗಡಿ ವಿವಾದಕ್ಕೆ ಸಂಬಂಧಿಸಿದ ತಿಕ್ಕಾಟಗಳಿಂದ ಕಾವೇರುತ್ತಿದ್ದ ಬೆಳಗಾವಿ ನಗರದ ವಾತಾವರಣವು ಇತ್ತೀಚಿಗಿನ ವಾರಗಳಲ್ಲಿ ಕಾರ್ಮಿಕ ಮತ್ತು ವಿದ್ಯಾರ್ಥಿಗಳ ಹೋರಾಟದಿಂದ ಬಿಸಿಯಾಗತೊಡಗಿದೆ. ಕೆನಡಾ ದೇಶದ ಬಹುರಾಷ್ಟ್ರೀಯ ಕಂಪೆನಿಯ ಮಾಲಕತ್ವದ ಇಂಡಾಲ್ ಕಾರಖಾನೆಯ ಕಾನೂನುಬಾಹಿರ ಬೀಗಮುದ್ರೆಯ ಪರಿಣಾಮವಾಗಿ ಖಾಯಂ ಮತ್ತು ಕಂಟ್ರಾಕ್ಟ್ ಕಾರ್ಮಿಕರು ಸೇರಿದಂತೆ ಒಂದೂವರೆ ಸಹಸ್ರಕ್ಕಿಂತಲೂ ಅಧಿಕ ಮಂದಿ, ಕಾನೂನಿನ ಕನಿಷ್ಠ ಸವಲತ್ತುಗಳಿಗಾಗಿ ಹೋರಾಟದ ಪಥದಲ್ಲಿದ್ದು, ಹಲವು ದಶಕಗಳಿಂದ ಅನುಸರಿಸಿಕೊಂಡು ಬಂದಿರುವ ವೃತ್ತಿಯನ್ನು ಕಳೆದುಕೊಳ್ಳುವ ಅಂಚಿನಲ್ಲಿದ್ದಾರೆ. ಸುಮಾರು ಇಪ್ಪತ್ತು ಸಹಸ್ರ ಪವರ್‌ಲೂಮ್ ಕಾರ್ಮಿಕರು ಮತ್ತು ಬೇಗಿ ಸುಸ್ತಿಯ ಶೋಷಣೆಯಿಂದ ಬೇಸತ್ತು ಬಿಡುವಾದ ಹೋರಾಟದ ಮಾರ್ಗವನ್ನು ಹಿಡಿದಿರುವ ಸಹಕಾರಿ ... ಹೋಮಿಯೋಪತಿಕ್ ವಿದ್ಯಾರ್ಥಿಗಳು-ಇವರೆಲ್ಲಾ ಸೇರಿ ಜಂಟೀ ಕ್ರಿಯಾಸಮಿತಿಯ ಮೂಲಕ ನಡೆಸುತ್ತಲಿರುವ ಐಕ್ಯಹೋರಾಟವನ್ನು ಹತ್ತಿಕ್ಕಲು ನಗರದಲ್ಲಿ ಹೇರಿರುವ ಸೆಕ್ಷನ್ 35ರನ್ವಯದ ಪ್ರತಿಬಂಧಕಾಜ್ಞೆ, ಸಾವಿನಂಚಿನಲ್ಲಿರುವ ಉಪವಾಸ ನಡೆಸುತ್ತಲಿರುವ ವಿದ್ಯಾರ್ಥಿಗಳು ಇವೆಲ್ಲಾ ಬೆಳಗಾವಿಯ ವಾತಾವರಣವನ್ನು ಬಿಸಿಯಾಗಿಸಿವೆ. ಬೆಳೆದು ಬರುತ್ತಲಿರುವ ದುಡಿಯುವ ಜನ ಮತ್ತು ವಿದ್ಯಾರ್ಥಿಗಳ ಐಕ್ಯತೆಯನ್ನು ಮುರಿಯಲು, ಸ್ಥಾಪಿತ ಹಿತಾಸಕ್ತಿಗಳೂ ಮತ್ತು ಪವರ್‌ಲೂಮ್ ಮಾಲಕರೂ ಸೇರಿ ಕಾರ್ಮಿಕರು ಹಿಂಸಾತ್ಮಕವಾದ ಚಳವಳಿಯನ್ನು ಪ್ರೇರೇಪಿಸುತ್ತಲಿರುವರು ಎಂಬ ಅಪಪ್ರಚಾರ ನಡೆಸುತ್ತಲಿವೆ. ವಿದ್ಯಾರ್ಥಿಗಳಿಗೆ, ದುಡಿಯುವ ಜನತೆಗೆ ನ್ಯಾಯ ಒದಗಿಸುವುದಕ್ಕೆ ಬದಲು ರಾಜ್ಯಸರಕಾರವು ಸುಳ್ಳು ಆಶ್ವಾಸನೆಗಳ ಮೂಲಕವೂ, ಸಂಘಟನಾ ಹಕ್ಕುಗಳನ್ನೇ ಕಿತ್ತುಕೊಳ್ಳುವುದರ ಮೂಲಕವೂ ಹೋರಾಟವನ್ನು ಬಗ್ಗುಬಡಿಯಲು ಯತ್ನಿಸುತ್ತಿದೆ. ಬೆಳಗಾವಿಯ ಕಾರ್ಮಿಕರ ಮತ್ತು ವಿದ್ಯಾರ್ಥಿಗಳ ಹೋರಾಟಕ್ಕೆ ರಾಜ್ಯದ ಎಲ್ಲಾ ದುಡಿಯುವ ಜನತೆ ಮತ್ತು ವಿದ್ಯಾರ್ಥಿಗಳು ಬೆಂಬಲವೀಯುವುದು ಅವಶ್ಯವಿದೆ.



"ಬೀಗಮುದ್ರೆಯನ್ನು ಪ್ರತಿಭಟಿಸಿ ಮೆರವಣಿಗೆ ನಡೆಸುತ್ತಲಿರುವ ಇಂಡಾಲ್ ಕಾರ್ಮಿಕರು"

(ಕೊನೆಯ ಪುಟ ನೋಡಿ)

ಮೇ ೩೦, ೧೯೭೦ ಸಿ.ಟಿ.ಐ.ಯು. ಸ್ಥಾಪನೆಯ ಹತ್ತನೆಯ ವಾರ್ಷಿಕೋತ್ಸವ

80 ಮಾರ್ಚ್ 21ರಿಂದ 23ರ ವರೆಗೆ ನವದೆಹಲಿಯಲ್ಲಿ ನಡೆದ ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿಯ ಸಭೆಯು 30-5-1980 ರಂದು ಎಲ್ಲಾ ಸಿ. ಐ. ಟಿ. ಯು. ಸಂಘಗಳೂ ಸಭೆಗಳನ್ನು ನಡೆಸಿ, ಕರಪತ್ರ, ಕಿರುಹೊತ್ತಿಗೆಗಳನ್ನು ಪ್ರಕಟಿಸಿ ಸಿ. ಐ. ಟಿ. ಯು. ಸಾಧನೆಗಳನ್ನು ವಿವರಿಸಿ ಸಿ. ಐ. ಟಿ. ಯು. ಸ್ಥಾಪನೆಯ ಹತ್ತನೆಯ ವಾರ್ಷಿಕೋತ್ಸವವನ್ನು ಆಚರಿಸಬೇಕೆಂದು ಕರೆಕೊಟ್ಟಿದೆ.

ಎಸ್. ಎ. ಡಾಂಗೆಯವರ ನೇತೃತ್ವದಲ್ಲಿದ್ದ ಎ. ಐ. ಟಿ. ಯು. ಸಿ.ಯು ನಮ್ಮ ದೇಶದ ಕಾರ್ಮಿಕವರ್ಗದ ಹಿತವನ್ನು ಬದಿಗೊತ್ತಿ ಕಾರ್ಮಿಕ ವರ್ಗವನ್ನು ಬಂಡವಾಳಗಾರರ ಬಾಲ ಬಡಿಯುವ ಸ್ಥಿತಿಗೆ ತರುವ ಧೋರಣೆಗಳನ್ನು ಅನುಸರಿಸಿಕೊಂಡು ಬಂದುದರಿಂದ ಸಮರಶೀಲ ಕಾರ್ಮಿಕ ಸಂಘಗಳು ಎ. ಐ. ಟಿ. ಯು. ಸಿ. ಯಲ್ಲಿ ಮುಂದುವರೆಯುವುದರಿಂದ ಕಾರ್ಮಿಕ ವರ್ಗದ ಹಿತರಕ್ಷಣೆ, ಐಕ್ಯತೆಯ ಬೆಳವಣಿಗೆ ಸಾಧ್ಯವೇ ಎಂದು ಚಿಂತಿಸಬೇಕಾಗಿ ಬಂದಿತು.

1966ರಲ್ಲಿ ಮುಂಬಯಿಯಲ್ಲಿ ನಡೆದ ಎ. ಐ. ಟಿ. ಯು. ಸಿ. ಸಮ್ಮೇಳನದಲ್ಲಿ ಡಾಂಗೆವಾದಿಗಳ ಹತೋಟಿಯಲ್ಲಿದ್ದ ಕಾರ್ಮಿಕ ಸಂಘಗಳು ಹೆಚ್ಚಿಸಿದ್ದ ಸುಳ್ಳು ಸದಸ್ಯತ್ವವನ್ನು ಯಾವ ತಕರಾರೂ ಇಲ್ಲದೆ ಒಪ್ಪಿಕೊಳ್ಳಲಾಯಿತು. ಕಾರ್ಮಿಕ ಸಂಘಗಳ ರಿಜಿಸ್ಟ್ರಾರರಿಗೆ ಸಲ್ಲಿಸಿದ ಕಳೆದ ಆಡಿಟ್ ಆದ ಅನ್ಯುಯಲ್ ರಿಟರ್ನ್ಸ್‌ನಲ್ಲಿ ತೋರಿಸಿರುವ ಸದಸ್ಯತ್ವವನ್ನು ಮಾತ್ರ ಒಪ್ಪಿಕೊಳ್ಳಬೇಕೆಂಬ ಸೂಚನೆಯನ್ನು ತಿರಸ್ಕರಿಸಲಾಯಿತು. ಅನೇಕ ಹೋರಾಟಗಳನ್ನು ನಡೆಸಿ ಮಾಲೀಕರ ಗೂಂಡಾದಾಳಿ, ಪೋಲೀಸರ ಲಾಠಿ ಗುಂಡುಗಳನ್ನು ಎದುರಿಸಿ ಜಯಶೀಲರಾಗಿದ್ದ ಕ್ಷಾತ್ರಶೀಲ ಕಾರ್ಮಿಕರ ನೂರಾರು ಸಂಘಗಳಿಗೆ ಮುಂಬಯಿ ಸಮ್ಮೇಳನದಲ್ಲಿ ಅಫಿಲಿಯೇಷನ್ ನಿರಾಕರಿಸಲಾಯಿತು.

ಹೀಗಿದ್ದಾಗ್ಯೂ, ಆಗ ಎ. ಐ. ಟಿ. ಯು. ಸಿ. ಉಪಾಧ್ಯಕ್ಷರಾಗಿದ್ದ ಕಾಂ. ಪಿ. ರಾಮಮೂರ್ತಿಯವರು "ಐಕ್ಯತೆ ಮತ್ತು ಹೋರಾಟದ ವೇದಿಕೆ"ಯನ್ನು ಕುರಿತ ನಿರ್ಣಯವನ್ನು ಸಮ್ಮೇಳನದಲ್ಲಿ ಮಂಡಿಸಿದರು. ಇದನ್ನು ವಿರೋಧಿಸುವ ಎದೆಗಾರಿಕೆ ಡಾಂಗೆವಾದಿಗಳಿಗಿರಲಿಲ್ಲ; ಸಮ್ಮೇಳನವು ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಿತು. ಆದರೆ ಮುಖಂಡತ್ವವು ಈ ನಿರ್ಣಯವನ್ನು ಕಾರ್ಮಿಕರ ನಡುವೆ ತೆಗೆದುಕೊಂಡು ಹೋಗದೆ ಸಮ್ಮೇಳನದ ಅತ್ಯಂತ ಮುಖ್ಯ ನಿರ್ಣಯವನ್ನು ನಾಶ ಮಾಡಿತು.

ಡಾಂಗೆಯವರ ಕೂಟವು ಕಾರ್ಮಿಕ ಸಂಘಗಳನ್ನು ಒಡೆಯಲಾರಂಭಿಸಿತು. ಚುನಾವಣೆ ನಡೆಸಿದರೆ ಸೋಲುತ್ತೇವೆಂಬ ಭಯದಿಂದ ವರ್ಷಗಟ್ಟಲೆ ಡಾಂಗೆಕೂಟ ಕಾರ್ಮಿಕ ಸಂಘಗಳಲ್ಲಿ ಚುನಾವಣೆಗಳನ್ನೇ ನಡೆಸಲಿಲ್ಲ. ಮುಖಂಡರು ಮಾಡಿದ ಕಾರ್ಮಿಕ ವಿರೋಧಿ ಒಪ್ಪಂದಗಳಿಂದ ಬೇಸತ್ತ ಕಾರ್ಮಿಕರು ಇತರ ಎಲ್ಲಾ ಪ್ರಜಾಪ್ರಭುತ್ವ ಕ್ರಮಗಳೂ ಉಪಯೋಗವಾಗಲಿಲ್ಲವೆಂದು ಅರಿತಾಗ ತಾವೇ ಸರ್ವ ಸದಸ್ಯರ ಸಭೆ (ಜನರಲ್ ಬಾಡಿ) ಕರೆದು ಹಳೆಯ ಮುಖಂಡರ ಸ್ಥಾನದಲ್ಲಿ ಹೊಸ ಮುಖಂಡರನ್ನು ಚುನಾಯಿಸಿದಾಗ ಡಾಂಗೆ ಕೂಟವು ಅವುಗಳನ್ನು ಒಪ್ಪದೆ ಪೋಟಿ ಸಂಘಗಳೆಂದು ಕರೆಯಿತು. ಕೆಲವು ಸಂಘಗಳಲ್ಲಿ ಚುನಾವಣೆ ನಡೆದು ಮುಖಂಡರು ಸೋತಾಗ ಕೂಡಲೇ ಅವರು ಪೋಟಿ ಸಂಘಗಳನ್ನು ರಚಿಸಿ ಎ. ಐ. ಟಿ. ಯು. ಸಿ. ಯ ಅಫಿಲಿಯೇಷನ್ ಕೊಟ್ಟರು. ಅನೇಕ ಸಂಘಗಳಲ್ಲಿ ಇಡೀ ಶಾಖೆಗಳನ್ನೇ ಅಮಾನತು ಮಾಡಲಾಯಿತು. ತಾವು ಮಾಲೀಕರಿಗೆ ಅನುಕೂಲವಾಗುವಂತೆ ಮಾಡಿಕೊಂಡ ಒಪ್ಪಂದಗಳನ್ನು ಒಪ್ಪದ ಪದಾಧಿಕಾರಿಗಳನ್ನು ಉಚ್ಚಾಟಿಸಲಾಯಿತು. ಸಂಘದ ಸಂವಿಧಾನ (ನಿಯಮ–ನಿಬಂಧನೆಗಳು) ವನ್ನು ಉಲ್ಲಂಘಿಸಿ ಅವರು ಈ ಕೃತ್ಯಗಳನ್ನೆಸಗಿದರು.

1966 ಡಿಸೆಂಬರಿನಲ್ಲಿ ನಡೆದ ಎ. ಐ. ಟಿ. ಯು. ಸಿ. ಜನರಲ್ ಕೌನ್ಸಿಲಿನ ಸಭೆಯಲ್ಲಿ ಕಾಂ. ಪಿ. ರಾಮಮೂರ್ತಿಯವರು ಉಭಯ ಪಕ್ಷಗಳ ಮೇಲ್ವಿಚಾರಣೆಯಲ್ಲಿ ಪ್ರಮಾಣಾತ್ಮಕ ಪ್ರಾತಿನಿಧ್ಯದ ಆಧಾರದ ಮೇಲೆ ಚುನಾವಣೆಗಳನ್ನು ನಡೆಸಿ ಎಲ್ಲಾ ಪೋಟಿ ಸಂಘಗಳನ್ನು ವಿಲೀನ ಮಾಡಬೇಕು ಎಂದು ಕೇಳುವ ನಿರ್ಣಯವನ್ನು ಮಂಡಿಸಿದರು. ಸಂಘಗಳಲ್ಲಿ ಪ್ರಜಾಪ್ರಭುತ್ವ ಕಾರ್ಯಾಚರಣೆ ನಡೆಯುವಂತೆ ಎ. ಐ. ಟಿ. ಯು. ಸಿ.ಯ ಅಖಿಲಭಾರತ ಮತ್ತು ರಾಜ್ಯದ ಕಾರ್ಯನಿರ್ವಾಹಕವು ನೋಡಿಕೊಳ್ಳಬೇಕೆಂದೂ ಸಂಘದ ಕಾರ್ಯಕಾರಿ ಸಮಿತಿಯ ಒಪ್ಪಿಗೆಯಿಲ್ಲದೆ, ಸದಸ್ಯರನ್ನು ಬಾಧಿಸುವ ಪ್ರಶ್ನೆಗಳ ಮೇಲೆ ಜನರಲ್ ಬಾಡಿ ಒಪ್ಪಿಗೆಯಿಲ್ಲದೆ ಪದಾಧಿಕಾರಿಗಳು ಮಾಲೀಕರೊಂದಿಗೆ ಒಪ್ಪಂದ ಮಾಡಬಾರದು ಎಂಬ ಅಂಶವೂ ಆ ನಿರ್ಣಯದಲ್ಲಿತ್ತು. ಡಾಂಗೆ ಕೂಟಕ್ಕೆ ಇದನ್ನು ವಿರೋಧಿಸಲು ಧೈರ್ಯವಿಲ್ಲದೆ ನಿರ್ಣಯ ಅಂಗೀಕಾರವಾಯಿತು,

ಈ ನಿರ್ಣಯವನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ಮಾಡಿದ ಎಲ್ಲಾ ಪ್ರಯತ್ನಗಳನ್ನು ಡಾಂಗೆ ಕೂಟವು ವಿಫಲಗೊಳಿಸಿತು.

1969 ಆಗಸ್ಟಿನಲ್ಲಿ ಡಾಂಗೆ ಮತ್ತು ಸಂಗಡಿಗರೊಂದಿಗೆ ಮಾತುಕತೆ ನಡೆಸುವಾಗ ಅವರ ಮನವೊಲಿಸುವ ಪ್ರಯತ್ನ ವಿಫಲವಾಯಿತು. 1970 ಜನವರಿಯಲ್ಲಿ ಜನರಲ್ ಕೌನ್ಸಿಲ್ ಮತ್ತು ಕಾರ್ಯಕಾರಿ ಸಮಿತಿಗಳಿಗೆ ತಿಳಿಸದೆ ಹೊಸಸಂಘಗಳನ್ನು ಅಫಿಲಿಯೇಟ್ ಮಾಡಲು ಅವಕಾಶ ಕೊಡದ ರೀತಿಯಲ್ಲಿ ಡಾಂಗೆ ಸಮ್ಮೇಳನ ತಾರೀಖುಗಳನ್ನು ನಿರ್ಣಯಿಸಿದರು.

ಐಕ್ಯತೆ ಮತ್ತು ಪ್ರಜಾಪ್ರಭುತ್ವ ಕಾರ್ಯಾಚರಣೆಗಾಗಿ ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾದಾಗ ಅನೇಕ ಕಾರ್ಮಿಕಸಂಘಗಳು ಡಾಂಗೆ ವರ್ತನೆಯನ್ನು ಪ್ರತಿಭಟಿಸಿ ಎ.ಐ.ಟಿ.ಯು.ಸಿ.ಯ ಗುಂಟೂರು ಅಧಿವೇಶನಕ್ಕೆ ಬಹಿಷ್ಕಾರ ಹಾಕಿದವು.

1970ರ ಏಪ್ರಿಲ್ 9, 10ರಂದು ಅಧಿವೇಶನವನ್ನು ಬಹಿಷ್ಕರಿಸಿದ ಎ.ಐ.ಟಿ.ಯು.ಸಿ. ಕಾರ್ಯಕಾರಿ ಸಮಿತಿ ಸದಸ್ಯರ, ಜನರಲ್ ಕೌನ್ಸಿಲ್ ಸದಸ್ಯರ ಮತ್ತು ರಾಜ್ಯ ಸಮಿತಿಗಳ ಸದಸ್ಯರ ಸಮಾವೇಶವು ಗೋವೆಯ ವಾಸ್ಕೋಡಗಾಮದಲ್ಲಿ ನಡೆದು ಪರಿಸ್ಥಿತಿಯನ್ನು ಪರಾಂಬರಿಸಿ 1970 ಮೇ 28 ರಿಂದ 31ರವರೆಗೆ ಕಲ್ಕತ್ತದಲ್ಲಿ ಅಖಿಲಭಾರತ ಸಮ್ಮೇಳನವನ್ನು ಕರೆಯಲು ನಿರ್ಧರಿಸಿತು. ವರ್ಗ ಹೋರಾಟದ ಧೋರಣೆಯನ್ನು ಸ್ವೀಕರಿಸಿದ, ಡಾಂಗೆ ಕೂಟದ ವಿಚ್ಛಿದ್ರಕಾರಿ ಮತ್ತು ವರ್ಗಸಹಯೋಗ ಧೋರಣೆಗಳ ವಿರುದ್ಧ ಹೋರಾಡ ಬಯಸುವ ಎಲ್ಲಾ ಕಾರ್ಮಿಕ ಸಂಘಗಳಿಗೂ ಸಮ್ಮೇಳನದಲ್ಲಿ ಭಾಗವಹಿಸಲು ಸಮಾವೇಶವು ಆಮಂತ್ರಿಸಿತು.

1970 ಮೇ 28ರಿಂದ 31ರವರೆಗೆ ಕಲ್ಕತ್ತದಲ್ಲಿ ನಡೆದ ಅಖಿಲ ಭಾರತ ಕಾರ್ಮಿಕ ಸಂಘಗಳ ಸಮ್ಮೇಳನವು 30 ರಂದು "ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್" (ಭಾರತದ ಕಾರ್ಮಿಕ ಸಂಘಗಳ ಕೇಂದ್ರ) ಸಿ. ಐ. ಟಿ.ಯು.ವನ್ನು ಸ್ಥಾಪಿಸಿತು.

'ಐಕ್ಯತೆ ಮತ್ತು ಹೋರಾಟ' ಧೋರಣೆಯನ್ನು ಸಿ. ಐ. ಟಿ. ಯು. ಅಂಗೀಕರಿಸಿತು. ಸಿ.ಐ.ಟಿ.ಯು. ಈ ಧೋರಣೆಯನ್ನು ಕೈಗಾರಿಕಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ, ಅಖಿಲ ಭಾರತ ಮಟ್ಟದಲ್ಲಿ ಜಾರಿಗೆ ತರಲು ಶ್ರಮಿಸಿ ಯಶಸ್ವಿಯಾಗಿದೆ.

ಸಿ. ಐ. ಟಿ. ಯು. ಸ್ಥಾಪನೆಯಿಂದ ಚಕಿತರಾದ ಬಂಡವಾಳಗಾರರು ಮತ್ತು ಅವರ ಸರ್ಕಾರ ಸಿ.ಐ.ಟಿ.ಯು.ವನ್ನು ಪ್ರತ್ಯೇಕಿಸಿ ಮೂಲೆಗುಂಪು ಮಾಡಲು ಸತತ ಪ್ರಯತ್ನಗಳನ್ನು ಮಾಡಿದರು.

1970ರ ಆಗಸ್ಟಿನಲ್ಲಿ ಪಶ್ಚಿಮ ಬಂಗಾಳದ ಸಶಸ್ತ್ರ ಪಡೆಗಳ ಜತೆಗೆ ಇತರ ರಾಜ್ಯಗಳ ಸಶಸ್ತ್ರ ಪೋಲೀಸು, ಗಡಿ ರಕ್ಷಣಾದಳ, ಕೇಂದ್ರ ಮೀಸಲು ಪೋಲೀಸುಗಳನ್ನು ಉಪಯೋಗಿಸಿ ದುರ್ಗಾಪುರದ ಉಕ್ಕಿನ ಕಾರ್ಮಿಕರ ಮುಷ್ಕರವನ್ನು ಸದೆಬಡೆಯಲು ಪ್ರಯತ್ನಿಸಲಾಯಿತು. ಕೇಂದ್ರ ಸರ್ಕಾರವು ರಚಿಸುವ ಸಮಿತಿಗಳಲ್ಲಿ ಸಿ.ಐ.ಟಿ.ಯುಗೆ ಪ್ರಾತಿನಿಧ್ಯವಿಲ್ಲ, ನಡೆಸುವ ತ್ರಿಪಕ್ಷೀಯ ಸಭೆಗಳಿಗೆ ಆಮಂತ್ರಣವಿಲ್ಲ. ಅಂತರ ರಾಷ್ಟ್ರೀಯ ಕಾರ್ಮಿಕ ಚಳುವಳಿಯೂ ಸಹ ಸಿ.ಐ.ಟಿ.ಯು.ವನ್ನು ಕಡೆಗಣಿಸಿತು ಆದರೆ ಕೇವಲ ಒಂದು ವರ್ಷದಲ್ಲಿ ಪರಿಸ್ಥಿತಿ ಬದಲಾಗಲಾರಂಭಿಸಿತು,

"ದಶಲಕ್ಷ ಕ್ಷಾತ್ರಶೀಲ ಕಾರ್ಮಿಕರ ಸದಸ್ಯತ್ವವಿರುವ ನಮ್ಮನ್ನು ನಮ್ಮ ಶತ್ರುಗಳು ಕಡೆಗಣಿಸಲಾಗದ ಅಜೇಯ ಶಕ್ತಿ ಎಂದು ಪರಿಗಣಿಸಿದರೆ ಇತರ ಕಾರ್ಮಿಕ ಸಂಘಗಳ ಸದಸ್ಯರು ವಿಶ್ವಾಸಾರ್ಹವಾದ ಹಿತರಕ್ಷಕರು ಎಂದು ನಮ್ಮನ್ನು ಪರಿಗಣಿಸುತ್ತಾರೆ" ಎಂದು ಕಾಂ. ಪಿ. ರಾಮಮೂರ್ತಿಯವರು ಕೊಯಮತ್ತೂರಿನಲ್ಲಿ ಜನರಲ್ ಕೌನ್ಸಿಲ್ ಸಭೆಯಲ್ಲಿ ವರದಿಯನ್ನು ಮಂಡಿಸುತ್ತಾ ಹೇಳಿದರು. ಇದು ಒಂದು ವರ್ಷದ ಬೆಳವಣಿಗೆ ಹಾಗೂ ಬದಲಾವಣೆಯನ್ನು ಸೂಚಿಸುತ್ತದೆ.

1971ರ ಲೋಕಸಭಾ ಚುನಾವಣೆಯ ನಂತರ ಇಂದಿರಾಗಾಂಧಿಯವರ ಕಾಂಗ್ರೆಸ್ ಸರಕಾರವು ತಾನು ಅನುಸರಿಸುವ ಬಂಡವಾಳಗಾರರ ಪರವಾದ ಮತ್ತು ಕಾರ್ಮಿಕರಿಗೆ ವಿರೋಧವಾದ ಧೋರಣೆಗಳಿಗೆ ಕಾರ್ಮಿಕರ ಒಪ್ಪಿಗೆಯ ಮುದ್ರೆಯನ್ನು ಪಡೆಯಲು ಐ.ಎನ್.ಟಿ.ಯು.ಸಿ., ಎ.ಐ.ಟಿ.ಯು.ಸಿ. ಮತ್ತು ಎಚ್. ಎಂ. ಎಸ್. ಗಳನ್ನು ಸೇರಿಸಿ ಒಂದು ರಾಷ್ಟ್ರೀಯ ಮಂಡಳಿಯನ್ನು ರಚಿಸಿತು.

1972ರಲ್ಲಿ ಪಶ್ಚಿಮ ಬಂಗಾಳದಲ್ಲಿ ಮೋಸದ ವಿಧಾನಸಭಾ ಚುನಾವಣೆ ನಡೆದ ನಂತರ ಆ ರಾಜ್ಯದ ಸಿ. ಐ. ಟಿ. ಯು. ಸಂಘಗಳ ಮೇಲೆ ಸದಸ್ಯರ ಮೇಲೆ ಅರೆಫ್ಯಾಸಿಸ್ಟ್ ದಬ್ಬಾಳಿಕೆ ಹೆಚ್ಚಾಯಿತು. ಸಿ. ಐ. ಟಿ. ಯು. ಸಂಘಗಳ ಮುನ್ನೂರಕ್ಕಿಂತಲೂ ಹೆಚ್ಚು ಆಫೀಸುಗಳನ್ನು ಕಾಂಗ್ರೆಸ್ ಗೂಂಡಾಗಳು ವಶಪಡಿಸಿಕೊಂಡರು. ಇಪ್ಪತ್ತು ಸಾವಿರಕ್ಕಿಂತಲೂ ಹೆಚ್ಚು ಕಾರ್ಮಿಕರನ್ನು ಅವರ ವಾಸಸ್ಥಾನಗಳಿಂದ (ಲೇಬರ್ ಕಾಲೊನಿಗಳಿಂದ) ಬಲಾತ್ಕಾರದಿಂದ ಓಡಿಸಲಾಯಿತು. ಅವರನ್ನು ಕಾರ್ಖಾನೆಯೊಳಗೆ ಪ್ರವೇಶಿಸದಂತೆ ತಡೆಯಲು ಗೇಟಿನಲ್ಲಿ ಸಶಸ್ತ್ರ ಗೂಂಡಾಗಳು ಸಜ್ಜಾಗಿ ನಿಂತಿರುತ್ತಿದ್ದರು. 1973ರ ಮಾರ್ಚ್ ವೇಳೆಗೆ ಪ್ರಜಾಪ್ರಭುತ್ವ ಮುಂಚೂಣಿಯಲ್ಲಿದ್ದ 600 ಮುಖಂಡರ ಕೊಲೆಯಾಯಿತು, ಇವರಲ್ಲಿ ಹೆಚ್ಚಿನವರು ಕಾರ್ಮಿಕ ಮುಖಂಡರು. ಈ ಅರೆಫ್ಯಾಸಿಸ್ಟ್ ದಬ್ಬಾಳಿಕೆಗೆ ಪಶ್ಚಿಮ ಬಂಗಾಳದ ಕಾರ್ಮಿಕರು ಜಗ್ಗಲಿಲ್ಲ, ಧೈರ್ಯದಿಂದ ಎದುರಿಸಿದರು.

1972ರ ಅಕ್ಟೋಬರ್ 1-2ರಂದು ನವದೆಹಲಿಯಲ್ಲಿ ಒಂದು ಸಮ್ಮೇಳನವು ನಡೆದು ಕಾರ್ಮಿಕವರ್ಗದ ಐಕ್ಯ ಕಾರ್ಯಾಚರಣೆಗೆ 'ಯುನೈಟೆಡ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್' ಎಂಬ ಸಂಸ್ಥೆಯ ಸ್ಥಾಪನೆಯಾಯಿತು. ಎಚ್. ಎಂ. ಪಿ., ಸಿ. ಐ. ಟಿ. ಯು., ಯು. ಟಿ. ಯು. ಸಿ., ಯು. ಟಿ. ಯು. ಸಿ. (ಲೆನಿನ್ ಸರಣಿ), ಎ. ಐ. ಐ. ಇ. ಎ., ಆಲ್ ಇಂಡಿಯಾ ನ್ಯೂಸ್ ಪೇಪರ್ ಎಂಪ್ಲಾಯೀಸ್ ಫೆಡರೇಷನ್, ಟ್ರೇಡ್ ಯೂನಿಯನ್ ಕೋಆರ್ಡಿನೇಷನ್ ಸೆಂಟರ್, ಆಲ್ ಇಂಡಿಯಾ ಮಾಡರ್ನ್ ಬೇಕರೀಸ್ ವರ್ಕರ್ಸ್ ಫೆಡರೇಷನ್ ಭಾಗವಹಿಸಿದ್ದುವು.

(ಮುಂದುವರೆಯುವುದು)

ಕಾರ್ಮಿಕರಿಗೆ ಹೆಚ್ಚಿದ ವೇತನ

ಸಿ. ಐ. ಟಿ. ಯು. ನೇತೃತ್ವದ ಚಿಕ್ಕಮಗಳೂರು–ಹಾಸನ ಸಾಮಿಲ್ಸ್ ಮತ್ತು ಜನರಲ್ ವರ್ಕರ್ಸ್ ಯೂನಿಯನ್ ಸದಸ್ಯರಾದ ಬೇಲೂರಿನ ಶ್ರೀಲಕ್ಷ್ಮೀ ಸಾಮಿಲ್ಸ್ ಕೆಲಸಗಾರರು ತಾ. 31–12–79 ರಂದು ವೇತನ ಏರಿಕೆಯ ಬೇಡಿಕೆಗಳನ್ನು ಮುಂದಿಟ್ಟು ಮಾಲೀಕರಿಗೆ ನೋಟೀಸು ಕೊಟ್ಟಿದ್ದರೂ, ಆಡಳಿತವರ್ಗ ಯಾವ ಉತ್ತರವನ್ನೂ ನೀಡಿರಲಿಲ್ಲ. ಇದರಿಂದ ಬೇಸತ್ತ ಕಾರ್ಮಿಕರು ತಾ. 15-4–80ರಂದು ಮಾಲೀಕರಿಗೆ ಮುಷ್ಕರದ ನೋಟೀಸು ಕೊಟ್ಟರು. ಇದರಿಂದ ನಿದ್ದೆ ಮಾಡುತ್ತಿದ್ದ ಮಾಲೀಕರು ಗಾಬರಿಯಾಗಿ ಮಾತುಕತೆ ನಡೆಸಲು ಸಿದ್ಧವೆಂದು ಸಂಘದ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದರು.

ತಾ. 10-5-80ರಂದು ಮಾತುಕತೆ ನಡೆದು ತಿಂಗಳಿಗೆ ಪ್ರತಿ ಕೆಲಸಗಾರನಿಗೆ ರೂ. 40ರಿಂದ 45ವರೆಗೆ ಸಂಬಳ ಹೆಚ್ಚಿಸುವ ತೀರ್ಮಾನವಾಯಿತು. ಈ ಹೆಚ್ಚಿನ ಸಂಬಳ ತಾ. 1-4-80ರಿಂದ ಜಾರಿಗೆ ಬರುತ್ತದೆ. ಒಪ್ಪಂದ ತಾ, 31-10-81ರವರೆಗೆ ಜಾರಿಯಲ್ಲಿರುತ್ತದೆ.

ಸಂಘದ ಪರವಾಗಿ ಕಾಂ. ವಿಶ್ವನಾಥ್, ಎಂ. ವಿ ಸುಬ್ಬಯ್ಯ ಹಾಗೂ ಎಂಟು ಜನ ಕಾರ್ಮಿಕರು ಸಹಿ ಮಾಡಿರುತ್ತಾರೆ.

ಯೋಜನೆಯ ತೀವ್ರ ಮಿತಿಗಳು

ಇ. ಎಂ. ಎಸ್. ನಂಬೂದಿರಿಪಾದ್

ಪ್ರಧಾನಮಂತ್ರಿಯು ಅಧ್ಯಕ್ಷೆಯಾಗಿರುವ ಯೋಜನಾ ಆಯೋಗದ ಮೊದಲನೆ ಔಪಚಾರಿಕ ಸಭೆಯ ನಂತರ ಆಯೋಗದ ವಕ್ತಾರರು ಆಡಿದ ಧೈರ್ಯದ ಮಾತುಗಳ ಬಗ್ಗೆ ಎಲ್ಲ ರಾಷ್ಟ್ರೀಯ ವಾರ್ತಾಪತ್ರಿಕೆಗಳ ಸಂಪಾದಕರು (ಇಂದಿರಾಗಾಂಧಿ ಆಡಳಿತದ ಉಗ್ರ ಬೆಂಬಲಿಗರೂ ಸೇರಿ) ಬರೆದಿರುವ ಸಂಪಾದಕೀಯದಲ್ಲಿ ಕುತೂಹಲಕ್ಕಿಂತ ಸಿನಿಕತನವೇ ಹೆಚ್ಚಾಗಿ ತುಂಬಿದೆ.

ಶೇಕಡಾ ಐದರಷ್ಟು ಅಭಿವೃದ್ಧಿ ಸೂಚಿಯ ಗುರಿ (ಅದನ್ನು 5.5ಕ್ಕೆ ಏರಿಸುವ ಸಾಧ್ಯತೆ), ಯೋಜನಾ ಪ್ರಕ್ರಿಯೆಯಲ್ಲಿ "ಜನತೆಯನ್ನು ಒಳಗೊಳ್ಳಲು" ಪ್ರಧಾನಮಂತ್ರಿಯವರ ಮನವಿ, ದುರ್ಬಲ ವರ್ಗಗಳನ್ನು ರಕ್ಷಿಸುವುದರಲ್ಲಿ ಅವರು ಕೊಟ್ಟಿರುವ "ಮಾರ್ಗದರ್ಶಕ ಸೂತ್ರಗಳು" ಇವೆಲ್ಲವೂ ಜನತೆಯಲ್ಲಿ ಮತ್ತು ಸಂಘಟಿತ ರಾಜಕೀಯ ಪಕ್ಷಗಳ, ದುಡಿಯುವ ಜನತೆಯ ಸಾಮೂಹಿಕ ಸಂಘಟನೆಗಳ ನಾಯಕರಲ್ಲಿ ಮತ್ತು ಕಾರ್ಯಕರ್ತರಲ್ಲಿ ಯಾವ ಪ್ರತಿಕ್ರಿಯೆಯನ್ನೂ ಹುಟ್ಟಿಸಲಿಲ್ಲ. "ನಾವು ಇದನ್ನು ಹಿಂದೆ ಸಾಕಷ್ಟು ಬಾರಿ ಕೇಳಿದ್ದೇವೆ" ಎಂಬುದೇ ಅವರ ಆಲೋಚನೆಯ ಹಿಂಬದಿಯಲ್ಲಿತ್ತು.

ನಾಲ್ಕನೇ ಯೋಜನೆಯ ಹಣೆಬರಹ :

ಇದೆಲ್ಲ ಅರ್ಥವಾಗುವಂತದೇ. ಆರನೇ ಪಂಚವಾರ್ಷಿಕ ಯೋಜನೆಯನ್ನು ರೂಪಿಸಲು ಎರಡು ವರ್ಷಗಳ ಹಿಂದೆ ಜನತಾ ಸರ್ಕಾರ ಕಸರತ್ತು ನಡೆಸಿತ್ತು. ಈಗ ಕಾಂಗ್ರೆಸ್ (ಐ) ಸರ್ಕಾರ ಅದನ್ನು ತಿರಸ್ಕರಿಸಿ ಎರಡನೇ ಬಾರಿಗೆ ಕಸರತ್ತು ನಡೆಸಿದೆ.

ಹಿಂದೆಯೂ ಕೂಡ, ಇಂದಿರಾ ಗಾಂಧಿ ಪ್ರಧಾನಮಂತ್ರಿಯಾಗಿದ್ದಾಗ, ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ಹೀಗೇ ಆಗಿತ್ತು. 1966–71ರ ಅವಧಿಗೆ ಸಿದ್ಧಪಡಿಸಿದ ಮೊದಲ ಕರಡನ್ನು ತ್ಯಜಿಸಿ, ವಾರ್ಷಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಯಿತು. ಮೂರು ವರ್ಷಗಳ "ಯೋಜನಾ ರಜಾದಿನ" ಇತ್ತು. ನಂತರ ನಾಲ್ಕನೇ ಯೋಜನೆಯ ಕಸರತ್ತುಗಳನ್ನು ಪುನಃ ಮಾಡಿ, 1969–74ರ ಅವಧಿಗೆ ಅದನ್ನು ಹೊಂದಿಸಿ, ಪೂರ್ಣಗೊಳಿಸಬೇಕಾಯಿತು.

ನಾಲ್ಕನೇ ಯೋಜನೆಯಿಂದ ಆರಂಭವಾಗಿ ಆರನೇ ಯೋಜನೆಯ ಎರಡನೇ ಆವೃತ್ತಿಯವರೆಗಿನ ಕಸರತ್ತುಗಳಿಂದ ಆದುದು ಇಷ್ಟು: ಸರಿಯಾಗಿ ಕ್ರಮಪ್ರಕಾರ ನಡೆದಿದ್ದಿದ್ದರೆ ಆರನೇ ಯೋಜನೆಯ ಕೊನೆಯ ವರ್ಷವಾಗಬೇಕಾಗಿದ್ದ 1980-81, ಈಗ ರೂಪುಗೊಳ್ಳುತ್ತಿರುವ ಆರನೇ ಯೋಜನೆಯ ಮೊದಲವರ್ಷವಾಗುವಂತಾಯಿತು.

ಕಣ್ಣಿಗೆಹೊಡೆಯುವ ಅಸಂಬದ್ಧತೆ:

ಪಂಚವಾರ್ಷಿಕ ಯೋಜನೆಗಳ ಅವಧಿಯ ಈ ವಿಪರ್ಯಾಸಗಳ ಹಿಂದೆ ಇರುವುದು, ಯೋಜನಾ ಆಯೋಗವು ಮೊದಲಿನಿಂದ ಕೊನೆಯ ಯೋಜನೆಯವರೆಗೆ ಕೊಟ್ಟಿದ್ದ ಭರವಸೆಗಳಿಗೂ ಆ ಯೋಜನೆಗಳ ಫಲಿತಾಂಶಗಳಿಗೂ ಹೊಂದಾಣಿಕೆ ಇಲ್ಲದಿರುವ ಶೋಚನೀಯ ಕಥೆ. ದೇಶದಲ್ಲಿ ಯೋಜನೆಗಳ ಪರಿಣಾಮವನ್ನು ತೋರಿಸಲು, ನಾವು ಪ್ರತಿಯೊಂದು ಪಂಚವಾರ್ಷಿಕ ಯೋಜನೆಗಳ ವಿವರಗಳಿಗೆ ಹೋಗದೆ, ಜನತಾ ಆಳಿಕೆಯಲ್ಲಿ (1978–83ರ ವರೆಗಿನ ಅವಧಿಗೆ) ಯೋಜನಾ ಆಯೋಗದಿಂದ ರೂಪುಗೊಂಡ ಆರನೇ ಪಂಚವಾರ್ಷಿಕ ಯೋಜನೆಯ ಮೊದಲಿನ ಕರಡನ್ನು ಪರಿಶೀಲಿಸಬಹುದು.

"ಈಗ ರೂಪುಗೊಂಡಿರುವ ಕೈಗಾರಿಕಾ ಅಭಿವೃದ್ಧಿಯ ಮಾದರಿಯು, ವೇತನಗಳ ವಿತರಣೆಯಿಂದ ನಿರ್ಧರಿತವಾದ ಬೇಡಿಕೆ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತಿದೆ...ಉನ್ನತ ವೇತನ ಗುಂಪುಗಳ ಜೀವನಮಟ್ಟವನ್ನು ನೇರವಾಗಿಯೋ ಪರೋಕ್ಷವಾಗಿಯೋ ಸುಧಾರಿಸುವುದಕ್ಕೆ ಸಂಬಂಧಪಡುವಂತೆ, ಉತ್ಪಾದನೆಯಲ್ಲಿ ವಿಪರೀತ ಸಂಪನ್ಮೂಲಗಳು ವಿನಿಯೋಗಗೊಂಡಿವೆ... ಆರ್ಥಿಕ ಶಕ್ತಿಯ ಕೇಂದ್ರೀಕರಣ ಹೆಚ್ಚಿದೆ ಎಂದರೆ, ಖಾಸಗಿ ವಲಯದಲ್ಲಿ ದೊಡ್ಡದೊಡ್ಡ ಸಂಸ್ಥೆಗಳ ಆಸ್ತಿಪಾಸ್ತಿಗಳು ಅತಿ ಶೀಘ್ರವಾಗಿಹೆಚ್ಚಿವೆ... ಗ್ರಾಮೀಣ ಆಸ್ತಿಯ ವಿತರಣೆಯ ಮೇಲೆ ಭೂಸುಧಾರಣಾ ಕ್ರಮಗಳು ಯಾವ ಪರಿಣಾಮವನ್ನೂ ಬೀರಿಲ್ಲ".

ಈ ವಿಮರ್ಶೆಯನ್ನು ಸದ್ಯದ ಯೋಜನಾ ಆಯೋಗ ಒಪ್ಪಿಕೊಳ್ಳುವುದೋ ಇಲ್ಲವೋ ಗೊತ್ತಿಲ್ಲ. ಒಂದು ಪಕ್ಷ ಒಪ್ಪಿಕೊಂಡರೆ, ಇದುವರೆಗಿನ ಯೋಜನೆಗಳ ದುಷ್ಪರಿಣಾಮಗಳನ್ನು ನಿವಾರಿಸಲು ಅದು ಯಾವ ಕ್ರಮ ಕೈಗೊಳ್ಳುತ್ತದೆ? ಅದು ಒಪ್ಪಿಕೊಳ್ಳದಿದ್ದರೆ, ಈ ಭಿನ್ನಾಭಿಪ್ರಾಯಗಳ ತಿರುಳೇನು? ಎರಡು ಸಂದರ್ಭದಲ್ಲಿಯೂ, ಹಿಂದಿನದಕ್ಕಿಂತ ಇಂದಿನ ಯೋಜನಾ ಆಯೋಗ ಹೆಚ್ಚಿನ ಅಭಿವೃದ್ಧಿ ಸೂಚಿಯನ್ನು ಕೊಟ್ಟಿದೆಯಲ್ಲ, ಅದಕ್ಕೆ ಕಾರಣವೇನು?– ಇದಕ್ಕೆಲ್ಲ ವಿವರಣೆಯಿಲ್ಲ. ತರ್ಕಬದ್ಧವಾಗಿ ವಾದಿಸುವುದಾದರೆ ಈಗ ಕೊಟ್ಟಿರುವ ಅಭಿವೃದ್ಧಿ ಸೂಚಿಗೆ ಆಧಾರವೇ ಇಲ್ಲ.

ಪ್ರಶ್ನೆ ಮತ್ತು ಉತ್ತರ:

ಹಾಗಿದ್ದಮೇಲೆ ಪ್ರಶ್ನೆ ಸಹಜವಾಗಿ ಏಳುತ್ತದೆ: ಯೋಜನಾ ಆಯೋಗಕ್ಕೆ ಒಬ್ಬ ಶಾಶ್ವತ ಉಪಾಧ್ಯಕ್ಷ ಮತ್ತು ಯೋಜನೆಗೆ ಒಬ್ಬ ಕ್ಯಾಬಿನೆಟ್ ಮಂತ್ರಿಯೇ ಇಲ್ಲದಿರುವಾಗ, ಅಂಥ ಅಭಿವೃದ್ಧಿ ಸೂಚಿಯನ್ನು ಘೋಷಿಸಿ, ಆರನೇ ಯೋಜನೆ 1980-81ರಿಂದ ಆರಂಭವಾಗುತ್ತದೆ ಎಂದು ಹೇಳುವುದರಲ್ಲಿ ಆಯೋಗದ ಅಧ್ಯಕ್ಷರಾದ ಪ್ರಧಾನಮಂತ್ರಿಯವರು ತಮ್ಮ ಅಧಿಕಾರದ ರಾಜಕೀಯ ಬಲವನ್ನು ಉಪಯೋಗಿಸಿದರೇಕೆ? ಎರಡು ವರ್ಷಗಳು ಈಗಾಗಲೇ ಕಳೆದುಹೋಗಿರುವ ಒಂದು ಪಂಚವಾರ್ಷಿಕ ಯೋಜನೆಯ ಪುನರ್ರಚನೆಯ ಬಗ್ಗೆ ಅವರಾಗಲೀ ಅವರ ಸಲಹೆಗಾರರಾಗಲೀ ಏನಾದರೂ ಆಲೋಚಿಸಿದ್ದಾರೆಯೆ? ಎರಡು ವರ್ಷಗಳವರೆಗೆ ಜನತಾ ಸರ್ಕಾರ ಅನುಸರಿಸಿದ್ದ ಯೋಜನೆಯ ನೀತಿಗಳು ಮತ್ತು ಆಯ್ಕೆಗಳಲ್ಲಿ ಯಾವ ಬದಲಾವಣೆಗಳನ್ನು ತಂದಿದ್ದೇವೆಂಬುದನ್ನು ಆಕೆ ಅಥವಾ ಆಕೆಯ ಸಲಹೆಗಾರರು ಜನತೆಗೆ ವಿವರಿಸಬಲ್ಲರೆ?

ಇದಕ್ಕೆ ಉತ್ತರ ಬಹಳ ಸರಳ : ಪ್ರಧಾನಿ ಮತ್ತು ಅವರ ರಾಜಕೀಯ ಸಲಹೆಗಾರರು, ಹಿಂದಿನ ಜನತಾ ಆಳಿಕೆಯ ಚೌಕಟ್ಟನ್ನು ಬದಲಾಯಿಸುವುದರಲ್ಲಿ, ಮೂರು ರಾಜ್ಯಗಳಲ್ಲಿ ಇನ್ನೂ ಉಳಿದಿರುವ ಕಾಂಗ್ರೆಯೇತರ ಸರ್ಕಾರಗಳ ಮೇಲೆ ರಾಜಕೀಯ ಆಕ್ರಮಣ ನಡೆಸುವುದರಲ್ಲಿ ತುಂಬ ನಿರತವಾಗಿರುವುದರಿಂದ, ಆರ್ಥಿಕ ಸಮಸ್ಯೆಗಳ ಬಗ್ಗೆಯಾಗಲೀ, ಯೋಜನೆಯ ಬಗ್ಗೆ ಆಗಲೀ ಯೋಚಿಸುವುದಕ್ಕೆ ಅವರಿಗೆ ಬಿಡುವೇ ಇಲ್ಲ.

ಪ್ರಧಾನಮಂತ್ರಿಯು ಅಧ್ಯಕ್ಷತೆ ವಹಿಸಿದ್ದ ಹೊಸ ಯೋಜನಾ ಆಯೋಗದ ಮೊದಲ ಸಭೆಯ ಸಮಯದಲ್ಲೇ, ಆಡಳಿತ ಪಕ್ಷದ ಅಧ್ಯಕ್ಷೆಯೂ ಆಗಿದ್ದ ಅವರು, ವಿಧಾನಸಭೆ ಚುನಾವಣೆಗಳ ನಂತರ ಅಧಿಕಾರ ಮತ್ತು ಸವಲತ್ತುಗಳಿಗಾಗಿ ಹೊಡೆದಾಡುತ್ತಿರುವ ವಿವಿಧ ಗುಂಪುಗಳ ಜಗಳಗಳನ್ನು ಪರಿಹರಿಸುವ ಕ್ಲಿಷ್ಟ ಸಂಘಟನಾ ಸಮಸ್ಯೆಗಳಲ್ಲಿ ಮುಳುಗಿಹೋಗಿದ್ದರು. ಕೇಂದ್ರ ಕ್ಯಾಬಿನೆಟ್ ಮತ್ತು ಪಕ್ಷದ "ಹೈಕಮ್ಯಾಂಡ್"ಗಳ ಅವರ ಅನೇಕ ಸಹೋದ್ಯೋಗಿಗಳು, ಕೇಂದ್ರದಲ್ಲಿ ಇರುವುದರಿಂದಲೋ ಅಥವಾ ಪ್ರಮುಖ ಅಧಿಕಾರ ತರುವ ತಮ್ಮ ರಾಜ್ಯಗಳಿಗೆ ಹಿಂತಿರುಗುವುದರಿಂದಲೋ ಇವೆರಡರಲ್ಲಿ ಯಾವುದು ಹೆಚ್ಚು ಪ್ರಯೋಜನಕಾರಿ ಎಂಬುದನ್ನು ನಿರ್ಣಯಿಸುತ್ತಿದ್ದಾರೆ. ಈಗ ಕಾಂಗ್ರೆ ಜೊತೆದಿರುವ ಕೆಲವು ರಾಜ್ಯಗಳ ಮುಖ್ಯಮಂತ್ರಿಗಳನ್ನು ಹಾಗೇ ಉಳಿಸಬೇಕೋ ಅಥವಾ ಬದಲಾಯಿಸಬೇಕೋ, ಜೂನ್‌ನಲ್ಲಿ ಕಾಂಗ್ರೆ ಹಿಡಿತಕ್ಕೆ ಬರಲಿರುವ ರಾಜ್ಯಗಳಲ್ಲಿ ಯಾರು ಮುಖ್ಯಮಂತ್ರಿಯಾಗಬೇಕು– ಇವೇ ಅವರಿಗೆ ಮುಖ್ಯವೇ ಹೊರತು, ಆರನೇ ಯೋಜನೆಯ ಸ್ವರೂಪ, ವಿಷಯಗಳು ಅಲ್ಲ.

ಜನತೆಯನ್ನು ವಂಚಿಸುವ ಪ್ರಯತ್ನ :

ಆದರೆ ಪ್ರಧಾನಮಂತ್ರಿ ಒಬ್ಬ "ರಾಜಕೀಯತಂತ್ರಜ್ಞ"ರು. ಯೋಜನಾ ಆಯೋಗದ ಸ್ಥಾನಗಳನ್ನು ಖಾಲಿ ಬಿಟ್ಟಿರುವುದರಿಂದ ಮತ್ತು ಪಂಚವಾರ್ಷಿಕ ಯೋಜನೆಯ ಕೆಲಸವನ್ನು ನಿಧಾನಿಸುವುದರಿಂದ, ವಿಧಾನಸಭೆ ಚುನಾವಣೆಗಳ ಹೋರಾಟದಲ್ಲಿ ರಾಜಕೀಯವಾಗಿ ತೊಂದರೆಯಾಗುತ್ತದೆಂದು ಅವರಿಗೆ ಗೊತ್ತು. "ಆವರ್ತ ಯೋಜನೆ"ಯನ್ನು ಕೈಬಿಡುವುದು ಮತ್ತು ಯೋಜನಾ ಪ್ರಕ್ರಿಯೆಯು ಆರಂಭವಾಗಿದೆಯೆಂದು ಅದ್ಭುತವಾಗಿ ಘೋಷಿಸಿದರೆ ಅದರಿಂದ ತುಂಬ ರಾಜಕೀಯ ಲಾಭವಿದೆಯೆಂದು ಅವರಿಗೆ ಗೊತ್ತು. ಇದರಿಂದ, ಜನತಾಪಕ್ಷವು "ಆವರ್ತ ಯೋಜನೆ"ಯನ್ನು ರೂಪಿಸಿ, ಭಾರತದ ಯೋಜನಾಬದ್ಧ ಆರ್ಥಿಕತೆಯ ಸಂಪ್ರದಾಯಕ್ಕೆ ಧಕ್ಕೆ ತಂದಿದೆಯೆಂದೂ, ಅವರ "ಪ್ರಗತಿಶೀಲ" ನಾಯಕತ್ವವು ಇದನ್ನು ನೆಹರು ಅವರು ಕಲ್ಪಿಸಿ, ಕ್ರಿಯಾರೂಪಕ್ಕೆ ತಂದ ರೂಪದಲ್ಲಿಯೇ ಪುನಃ ಸ್ಥಾಪಿಸಿದೆ ಎಂದು ಅವರ ಪಕ್ಷವು ಈಗ ಒಂಬತ್ತು ರಾಜ್ಯಗಳ ಚುನಾವಣಾ ಪ್ರಚಾರದಲ್ಲಿ ಹೇಳಿಕೊಳ್ಳಬಹುದು.

ಹಿಂದಿನ ಯೋಜನೆಗಳನ್ನು ರೂಪಿಸುವಾಗ ನಡೆಸಿದ್ದ ಕಸರತ್ತುಗಳು ಮತ್ತು ಇಂದಿನ ಯೋಜನಾ ರಚನೆಯಲ್ಲಿ ಅಂಥ ಚಟುವಟಿಕೆಗಳ ಅಭಾವ ಇವೆರಡನ್ನೂ ಗಂಭೀರವಾಗಿ ಅಧ್ಯಯನ ಮಾಡಿದವರಿಗೆ, ಹೆಚ್ಚಿನ ಅಭಿವೃದ್ಧಿ ಸೂಚಿಯ ಗುರಿಯೆಲ್ಲವೂ ಆಧಾರರಹಿತವಾದದ್ದು ಎನ್ನಿಸದೆ ಇರುವುದಿಲ್ಲ. ಸದ್ಯದಲ್ಲಿ ಭಾರತ ಮತ್ತು ವಿದೇಶಗಳಲ್ಲಿ ಇರುವ ಹಣದುಬ್ಬರದ ಪರಿಸ್ಥಿತಿಗಳು ಈಗ ಮಾಡಿರುವ ಲೆಕ್ಕಾಚಾರವನ್ನು, ಹಿಂದಿನ ಆಯೋಗದ ಲೆಕ್ಕಾಚಾರವು ಬೆಲೆಯಿಲ್ಲದಂತಾದಂತೆಯೇ ಇದನ್ನೂ ಕೆಳಗಿಳಿಸುತ್ತದೆ ಎಂದು ಕೆಲವು ಟೀಕೆಗಾರರು ಸರಿಯಾಗಿಯೇ ಗುರುತಿಸಿದ್ದಾರೆ. ಆದ್ದರಿಂದ, ಸರಿಯಾಗಿ ಹೇಳುವುದಾದರೆ, ಆಯೋಗವು ತನ್ನ ಮೊದಲ ಔಪಚಾರಿಕ ಸಭೆಯ ನಂತರ ಇತ್ತಿರುವ ಘೋಷಣೆಯು ಜನತೆಯನ್ನು ವಂಚಿಸುವ ಪ್ರಯತ್ನವಾಗಿದೆ ಎನ್ನಬಹುದು.

ಯೋಜನೆಯ ಮಿತಿಗಳು :

ನಮ್ಮ ಯೋಜನಾಕಾರರು ಗಂಭೀರ ಆಲೋಚನೆಯುಳ್ಳವರಾಗಿದ್ದರೆ ಮತ್ತು ಯೋಜನೆಯು ಸಫಲವಾಗಿರುವ ದೇಶಗಳ ಅನುಭವಗಳನ್ನು ನಮ್ಮ ದೇಶದ ಯೋಜನೆಯ ಸಮಸ್ಯೆಗಳ ಜೊತೆ ಹೋಲಿಸುವುದಕ್ಕೆ ಮನಸ್ಸು ಮಾಡುವವರಾದರೆ, ನಮ್ಮ ದೇಶದಲ್ಲಿಯೋಜನಾ ಪ್ರಕ್ರಿಯೆಯು ಯಾವ ಮಿತಿಗಳೊಳಗೆ ಆರಂಭವಾಯಿತು ಎಂಬುದನ್ನು ಅರಿತುಕೊಳ್ಳಬೇಕು. ಈ ಮಿತಿಗಳೆಂದರೆ :

1) ಜಗತ್ತಿನ ಇತಿಹಾಸದಲ್ಲಿ ಬಂಡವಾಳಶಾಹಿಯು ಒಂದು ತೀವ್ರ ಸ್ವರೂಪದ ಬಿಕ್ಕಟ್ಟನ್ನು ಎದುರಿಸುತ್ತಿರುವ ಸಮಯದಲ್ಲೇ ಭಾರತದಲ್ಲಿ ಯೋಜನೆ ಆರಂಭವಾಯಿತು. ಜಗತ್ತಿನ ಬಂಡವಾಳಶಾಹಿ ಬಿಕ್ಕಟ್ಟಿನ ಬಿಸಿ ತಾಕದಂಥ ಆರ್ಥಿಕತೆಯನ್ನುಳ್ಳ ದೇಶದಲ್ಲಿ ಮಾತ್ರ ಯೋಜನೆ ಸಫಲವಾಗಬಲ್ಲದು. ಸಮಾಜವಾದಿ ದೇಶಗಳಲ್ಲಿ ಯೋಜನೆ ಆರಂಭವಾಗುವುದಕ್ಕೆ ಮುಂಚೆ ಪರಿಸ್ಥಿತಿ ಹಾಗೆ ಹದಗೊಂಡಿತ್ತು. ಭಾರತದ ಯೋಜನೆಗೆ ಇಂಥ ಪರಿಸ್ಥಿತಿ ಇರಲಿಲ್ಲ, ಇಂದಿಗೂ ಇಲ್ಲ. ಜಗತ್ತಿನ ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟಿನಿಂದ ಉದಯಿಸುವ ಕ್ಷೋಭೆಗಳಿಗೆ ನಮ್ಮ ಆರ್ಥಿಕತೆ ಯಾವಾಗಲೂ ಪಕ್ಕಾಗುತ್ತಾ ಬಂದಿದೆ. ಈ ವ್ಯವಸ್ಥೆಯ ಬಿಕ್ಕಟ್ಟಿನ ಪರಿಣಾಮವು ಇತರ ಮುಂದುವರಿದ ಬಂಡವಾಳಶಾಹಿ ದೇಶಗಳಿಗಿಂತ ಮೂರನೇ ಜಗತ್ತಿನ ದೇಶಗಳಿಗೆ ಮತ್ತು ಭಾರತದಲ್ಲಿ ಹೆಚ್ಚು ತೀವ್ರವಾಗಿರುತ್ತದೆ;

2) ಸಮಾಜವಾದಿ ದೇಶಗಳಲ್ಲಿ ಭೂಮಿ ಮತ್ತಿತರ ನೈಸರ್ಗಿಕ ಸಂಪನ್ಮೂಲಗಳು, ಕೈಗಾರಿಕಾ ಉದ್ಯಮಗಳು, ಹಣಕಾಸು ವ್ಯವಹಾರಗಳು ಇವೆಲ್ಲದರ ಮೇಲೆ ಸಾಮಾಜಿಕ ನಿಯಂತ್ರಣ ಇರುವುದರಿಂದ ಅಲ್ಲಿ ರಾಷ್ಟ್ರದ ಅಭಿವೃದ್ಧಿಗಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಬಹುದು. ಆದರೆ ಭಾರತದಲ್ಲಿ "ಮಿಶ್ರ ಆರ್ಥಿಕತೆ" ಯೆಂಬ ದುಷ್ಟ "ನೀತಿ"ಯಿಂದಾಗಿ, ದೇಶದ ಸಂಪನ್ಮೂಲಗಳೆಲ್ಲವೂ ಭೂಮಾಲೀಕರ, ಬಂಡವಾಳಶಾಹಿಗಳ ಮತ್ತು ವಿದೇಶಗಳ ಬಹುದೇಶಿ ಗುತ್ತೇದಾರಿಗಳ ಕೈಯಲ್ಲಿರುತ್ತವೆ. ನಮ್ಮ ಆರ್ಥಿಕತೆಯನ್ನು ಜಮೀನು, ಕೈಗಾರಿಕೆ ಮತ್ತು ಹಣಕಾಸು ಸಂಸ್ಥೆಗಳ ದೊಡ್ಡ ಮಾಲೀಕರು ನಿಯಂತ್ರಿಸುತ್ತಿರುವುದರಿಂದಲೇ ಯೋಜನೆಯ ಮೂಲ ಕಡಿದುಹೋಗುತ್ತದೆ ಮತ್ತು ನಮ್ಮ ಆರ್ಥಿಕತೆ ವಿವಿಧ ರೀತಿಯ ಬಿಕ್ಕಟ್ಟಿನಲ್ಲಿ ಬೀಳುತ್ತದೆ.

3) ಯೋಜನೆ ಸಫಲವಾಗಬೇಕಾದರೆ ಪ್ರಧಾನಮಂತ್ರಿ ತಾವೇ ಹೇಳುವ ಹಾಗೆ "ಯೋಜನಾ ಪ್ರಕ್ರಿಯೆಯಲ್ಲಿ ಜನತೆ ಪಾಲ್ಗೊಳ್ಳಬೇಕು." ಇದಾಗಬೇಕಾದರೆ ಕೇಂದ್ರದಿಂದ ರಾಜ್ಯಗಳಿಗೆ, ರಾಜ್ಯಗಳಿಂದ ಪಂಚಾಯಿತಿವರೆಗೆ ಇನ್ನೂ ಕೆಳಹಂತಗಳಿಗೆ ಅಧಿಕಾರ ಮತ್ತು ಸಂಪನ್ಮೂಲಗಳ ವಿಕೇಂದ್ರೀಕರಣ ಆಗಬೇಕು. ಅಲ್ಲದೆ ಯೋಜನೆಯ ನೀತಿಗಳು, ಆಯ್ಕೆಗಳ ರಚನೆಯಲ್ಲಿ ದುಡಿಯುವ ಜನತೆಯು ತಮ್ಮ ಸಂಘಟನೆಗಳ ಮೂಲಕ ಭಾಗವಹಿಸುವಿಕೆಯೂ ಬೇಕು. ಆದರೆ, ಆಳುವ ಪಕ್ಷ ಈದಿನ ಪ್ರಧಾನಮಂತ್ರಿಯ ಕಾಲದಲ್ಲಲ್ಲದೆ, ಯೋಜನೆಯು ರೂಪುಗೊಂ

(6ನೇ ಪುಟ ನೋಡಿ)

ಕಠಿಣ ಹೋರಾಟದ ನೋವಿನ ಕಥೆ

ಈ ಹೋರಾಟದ ಕಥೆ ಆರಂಭವಾಗಿ ಆರು ವರ್ಷಗಳಾಗುತ್ತಾ ಬಂತು. ರೈತಸಂಘದ ನಾಯಕ ಶಾಂ. ಜಗನ್ನಾಥ 1974ರಲ್ಲಿ ತನ್ನೂರು ತಲಗಟ್ಟಪುರಕ್ಕೆ ಒಂದು ಗೊತ್ತಾದ ರಾತ್ರಿ ಕರೆದಿದ್ದ. ಬೆಂಗಳೂರು-ಕನಕಪುರ ಮಾರ್ಗದಲ್ಲಿನ 10ನೇ ಮೈಲಿಕಲ್ಲಲ್ಲಿ ಇಳಿದೆ. ಸುರಿಯುತ್ತಿದ್ದ ಮಳೆಯ ನಡುವೆ ಪುಟ್ಟ ಹೆಂಚಿನ ಮನೆಯೊಂದಕ್ಕೆ ಹೋದೆ. ಅಲ್ಲಲ್ಲಿ ಸೋರುತ್ತಿದ್ದ ಆ ಮನೆಯ ಮೂಲೆಯೊಂದರಲ್ಲಿ ರಾಗಿ ಮುದ್ದೆಯ ಊಟ. ಸೋರುವ ಮನೆಯಲ್ಲಿ ಸಂಸಾರ ಮಾಡುತ್ತಲಿದ್ದ ಮನೆಯೊಡತಿ ಜ್ಯೋತಿಯು ಮನಸ್ಸಿನಲ್ಲಿಯೇ ಹಿಡಿಶಾಪ ಹಾಕುತ್ತಿದ್ದಳು.

ಊಟದ ನಂತರ ಹಾಕಿಕೊಂಡ ಕಪ್ಪಗಿನ ಮೈಸೂರ್ ಎಲೆ-ಅಡಿಕೆ ಆ ಚಳಿಗೆ ನಮ್ಮನ್ನು ಸ್ವಲ್ಪ ಬೆಚ್ಚಗೆ ಮಾಡಿತ್ತು. 'ಬಾ...ಇಲ್ಲೇ ಬರನಾ' ಎಂದು ಕರೆದುಕೊಂಡು ಹೊರಟ ರೈತಸಂಘದ ನಾಯಕನನ್ನು ಹಿಂಬಾಲಿಸಿದೆ. ಸ್ವಾನೆ ಮಳೆಯ ನಡುವೆ ಒಂದರ್ಧ ಗಂಟೆ ನಡೆದ ನಂತರ ವಿಶಾಲವಾಗಿದ್ದ ಗುಡಿಸಿಲೊಂದನ್ನು ಹೊಕ್ಕೆವು. 'ಏನ್ರಣ್ಣ...ಚೆನ್ನಾಗಿದ್ದೀರಾ'. ಹತ್ತಾರು ಕಪ್ಪು ಜನರು ನಮ್ಮನ್ನು ನಗುತ್ತಾ ಸ್ವಾಗತಿಸಿದರು. ಸೇರಿದ್ದವರಲ್ಲಿ ಬಹುಪಾಲು ಮಹಿಳೆಯರು. ಮೀಟಿಂಗ್‌ನಲ್ಲಿ ಒಂದು ಭಾಷಣ ಮಾಡುವವರಿಗೆಂದು ಆ ಜನ ಒಂದು ಬೇಂಚು ಮತ್ತು ಕುರ್ಚಿಯನ್ನು ಅದೆಲ್ಲಿಂದಲೋ ತಂದಿಟ್ಟಿದ್ದರು. ನಾವು ಕುಳಿತ ಸ್ವಲ್ಪ ಹೊತ್ತಿಗೆ ಸ್ಕೂಟರ್ ಒಂದು ಶಬ್ದ ಮಾಡುತ್ತಾ ಬಂದು ಗುಡಿಸಲಿನಿಂದ ಸ್ವಲ್ಪ ದೂರದಲ್ಲಿ ನಿಂತರು. ಒಂದಿಬ್ಬರು ಗಂಡಸರು ಹಾಗೂ ಜಗನ್ನಾಥ ಹೊರಗಡೆ ಹೋಗಿ ಬಂದವರನ್ನು ಕರೆತಂದರು. ರೈನ್‌ಕೋಟ್ ಧರಿಸಿಕೊಂಡು ಬಂದ ಉದ್ದನೆಯ ದಪ್ಪ ವ್ಯಕ್ತಿಯ ಗುರುತು ಸಿಕ್ಕಲಿಲ್ಲ. ಅತಿಥಿಗಳಿಗಾಗಿ ತಂದಿಡಲಾಗಿದ್ದ ಬಾಳೇಹಣ್ಣು, ಬಿಸ್ಕತ್ತು, ಎಲೆಅಡಿಕೆಯ ತಟ್ಟೆಯನ್ನು ಕೈಗೆತ್ತಿಕೊಂಡು ಕುರ್ಚಿಯ ಮೇಲೆ ಕುಳಿತು ಎಲೆಅಡಿಕೆ ಜಗಿಯುತ್ತಾ ಮಾತನಾಡಲಾರಂಭಿಸಿದರು ಆ ವ್ಯಕ್ತಿ. ಅಲ್ಲಿ ಸೇರಿದ್ದ ಆ ಕಪ್ಪು ಜನ ಹರಿಜನರೆಂಕಲೂ, ಅವರೆಲ್ಲರೂ ಸಮೀಪದಲ್ಲಿನ ತಾತಗುಣಿ ಎಸ್ಟೇಟಿನಲ್ಲಿ ಕಳೆದ ಮುವ್ವತ್ತೈದು ವರ್ಷಗಳಿಂದ ದುಡಿದುಕೊಂಡು ಬಂದಿರುವ ಕಾರ್ಮಿಕರೆಂದು ಭಾಷಣ ಮಾಡುತ್ತಿದ್ದವರು ಹೇಳುತ್ತಿದ್ದರು. ಹಳ್ಳಿಗಳಲ್ಲಿನ ಗಾದೆಗಳನ್ನು ಆಗಾಗ ಉಪಯೋಗಿಸುತ್ತಿದ್ದ ಈ ನಾಯಕರು ಯಾರೆಂದು ಒಬ್ಬರನ್ನು ಕೇಳಿದೆ. 'ಸೂರ್ಯನಾರಾಯಣರಾವ್ ಅಂತ. ಕಮ್ಯುನಿಸ್ಟ್ ಲೀಡರ್ ಇವರು' ಎಂದು ಕಾರ್ಮಿಕನೊಬ್ಬ ಉತ್ತರಿಸಿದ.

ದೀರ್ಘ ಕಾಲದಿಂದ ದುಡಿದುಕೊಂಡು ಬರುತ್ತಿರುವ ಎಸ್ಟೇಟ್ ಕಾರ್ಮಿಕರಿಗೆ ಸಿಗುತ್ತಿದ್ದ ದಿನಗೂಲಿ ಕೇವಲ 2-3 ರೂ. ಎಂದು ನಾಯಕರು ಹೇಳಿದಾಗ ನೋವಾಯಿತು.

ಎಂಟುನೂರು ಎಕರೆಗಳ ಪ್ರದೇಶದ ಈ ಭೂ ಭಾಗ ಪ್ಲಾಂಟೇಶನ್ ಕಾಯಿದೆಯ ಅಡಿಯೂ ಬಂದಿಲ್ಲ. ಭೂಸುಧಾರಣಾ ಶಾಸನದಿಂದಲೂ ಇದಕ್ಕೆ ವಿನಾಯ್ತಿಯನ್ನು ಸರ್ಕಾರ ಕೊಟ್ಟಿದೆ ಎಂದು ಕಮ್ಯುನಿಸ್ಟ್ ನಾಯಕರು ವಿವರಿಸಿದಾಗ ನನಗೆ ಅಚ್ಚರಿಯಾಯಿತು.

ಸರ್ಕಾರದ ಈ ಕೃಪಾಕಟಾಕ್ಷಕ್ಕೆ ಪಾತ್ರರಾದ ಈ ದೊಡ್ಡ ಜನ ಯಾರೆಂದು ತಿಳಿಯುವ ಕುತೂಹಲ ಶುರುವಾಯಿತು. ಯಾಕೆಂದರೆ ಆಗ ಕಂದಾಯ ಸಚಿವರಾಗಿದ್ದವರು ನನ್ನೂರಿನವರಾಗಿದ್ದರು. ಸರ್ಕಾರದ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದವರು ಸಾಮಾನ್ಯರೇನೂ ಆಗಿರಲಿಲ್ಲ. ಐವತ್ತರ ದಶಕದ ಪ್ರಸಿದ್ಧ ಸಿನಿಮಾ ತಾರೆ ದೇವಿಕಾರಾಣಿ ಮತ್ತು ಮೂಲತಃ ರಷ್ಯಾ ದೇಶದವನಾದ ವಿಶ್ವವಿಖ್ಯಾತ ಕಲಾವಿದ ರೋರಿಚ್ ಅವರೇ ಈ ಎಸ್ಟೇಟಿನ ಭಾಗ್ಯವಂತ ಮಾಲೀಕರು. 1952ರ ಸುಮಾರಿಗೆ ಆಂಗ್ಲನೊಬ್ಬನಿಂದ ಈ 800 ಎಕರೆಯ ಭೂಮಿಯನ್ನು ಕೊಂಡ ಇವರು ಅಲ್ಲಿ ಅನ್ನ ಬೆಳೆಸಲಿಲ್ಲ. ಬದಲಾಗಿ ಪಟ್ಟಣಗಳಲ್ಲಿನ ಸಿರಿವಂತರು ಉಪಯೋಗಿಸುವ ಗಮಲದ ಎಣ್ಣೆ ತಯಾರಿಕೆಗೆ ಅಗತ್ಯವಾದ ಸೆಂಟ್ ಕಾಯಿಯ ಗಿಡಗಳನ್ನು ಬೆಳೆಸತೊಡಗಿದರು ಇಲ್ಲಿ ತಯಾರಾದ ಗಮಲದ ಎಣ್ಣೆಯು ಹೊರದೇಶಗಳಿಗೂ ಹೋಗುತ್ತದೆಂದು ಇಲ್ಲಿನ ಕಾರ್ಮಿಕರೇ ಹೇಳಿದರು.

ವಿಶಾಲವಾದ ಎಸ್ಟೇಟಿನ ಒಟ್ಟು ಉತ್ಪನ್ನದಿಂದ ಮಾಲೀಕರಿಗೆ ವರ್ಷವೊಂದಕ್ಕೆ 40-45ಲಕ್ಷ ರೂ.ಗಳ ಲಾಭ ಇದೆ ಎಂದು ಕಮ್ಯುನಿಸ್ಟ್ ನಾಯಕರು ಸಭೆಗೆ ವಿವರಿಸಿದಾಗ ಸಿಟ್ಟು ಬಂತು.

'ನಗರಗಳಲ್ಲಿನ ಕಾರ್ಮಿಕರು ಸಂಘಗಳನ್ನು ಕಟ್ಟಿಕೊಂಡು ತಮ್ಮ ಜೀವನದ ಉತ್ತಮ ಸ್ಥಿತಿಗೆ ಹೋರಾಡುತ್ತಾರೆ. ಸಿ.ಐ.ಟಿ.ಯು. ಕಾರ್ಮಿಕಸಂಘಟನೆಯು ನಿಮಗೆ ನಾಯಕತ್ವ ಕೊಡುತ್ತದೆ. ಜೊತೆಗೆ ನಿಮ್ಮೊಂದಿಗೇ ಬದುಕುತ್ತಿರುವ ರೈತಸಂಘದ ನಾಯಕ ಜಗನ್ನಾಥನೂ ಇದ್ದಾನಲ್ಲ. (ರೈತರು-ಕಾರ್ಮಿಕರು ಒಟ್ಟಾದರೆ ಅವರಿಗೆ ಅಸಾಧ್ಯವಾದದ್ದು ಏನೂ ಇಲ್ಲ' ಎಂಬುದಾಗಿ ಕಮ್ಯುನಿಸ್ಟ್ ನಾಯಕರು ಆ ಕಪ್ಪು ಜನರನ್ನು ಹುರಿದುಂಬಿಸಿದರು. ಬೇಸಾಯ ಕೂಲಿಗಾರರ ಎಲ್ಲ ಹೋರಾಟಗಳಲ್ಲಿ ಬುಜಕ್ಕೆ ಬುಜ ಕೊಡುವ ಮಾತು ಕೊಟ್ಟ ರೈತಸಂಘದ ನಾಯಕ ಜಗನ್ನಾಥ ಕೂಲಿಗಾರರಲ್ಲಿ ಮತ್ತಷ್ಟು ಧೈರ್ಯ ತುಂಬಿದ.

'ತಾತಗುಣಿ ಎಸ್ಟೇಟ್ ಕಾರ್ಮಿಕರ ಸಂಘ' ಸ್ಥಾಪನೆಯಾಯಿತು. ಎಸ್ಟೇಟ್ ಕಾರ್ಮಿಕರ ವೇತನದ ಮಾತಿರಲಿ, ಕೃಷಿ ಕಾರ್ಮಿಕರಿಗೆ ರಾಜ್ಯ ಸರ್ಕಾರ ನಿಗಧಿಪಡಿಸಿರುವ ಕನಿಷ್ಟ ಕೂಲಿ 5ರೂ 60ಪೈಸೆಯನ್ನಾದರೂ ಜಾರಿ ಮಾಡಿ ಎಂದು ಸಂಘವು ಮಾಲೀಕರಿಗೆ ನೋಟೀಸ್ ನೀಡಿತು. ನೋಟೀಸಿಗೆ ಉತ್ತರ ಸಿಕ್ಕಲು ಒಂದು ವರ್ಷವೇ ಬೇಕಾಯಿತು. ಉತ್ತರ ಸಿಕ್ಕಿದ್ದು 1975ರಲ್ಲಿ. ಯಾವ ಅಪರಾಧವನ್ನೂ ಮಾಡದೆ ಸೆರೆಮನೆ ಸೇರಿದ ಸಾವಿರಾರು ಮಂದಿಯಲ್ಲಿ ರೈತಸಂಘದ ನಾಯಕ ಜಗನ್ನಾಥ, ಸಿ.ಐ.ಟಿ.ಯು. ನಾಯಕ ಸೂರ್ಯನಾರಾಯಣರಾವ್ ಅವರೂ ಸೇರಿ ಹೋದರು. ಎಸ್ಟೇಟ್ ಮಾಲೀಕರ ಕಾರಿನ ಚಾಲಕ ಚಿನ್ನಪ್ಪ ಹತ್ತನ್ನೆರಡು ಮಕ್ಕಳ ತಂದೆ. ಆತನೂ ಇಂದಿರಾಗಾಂಧಿಯ ರಾಜಕೀಯ ವಿರೋಧಿಯಾದ! ಇಂಡಿಯಾದ ಭದ್ರತೆಗೆ ಬಹು ದೊಡ್ಡ ಗಂಡಾಂತರಕಾರಿಯಾದ! ತಲಗಟ್ಟಪುರ ಗ್ರೂಪ್ ಪಂಚಾಯ್ತಿಯ ಛೇರ್ಮನ್ ಶ್ರೀ ಮುನಿರಾಮಯ್ಯ ಸ್ಥಳೀಯ ಕಾಂಗ್ರೆಸ್ ಪಕ್ಷದ ಮುಖಂಡ. ಈತನಿಗೂ ಸೆರೆಮನೆವಾಸ ತಪ್ಪಲಿಲ್ಲ. ಇಂದಿರಾಗಾಂಧಿಯವರ 20 ಅಂಶದ ಕಾರ್ಯಕ್ರಮದಂತೆ ಬೇಸಾಯ ಕೂಲಿಗಾರರಿಗೆ ದಿನಗೂಲಿ 5ರೂ. 60ಪೈಸೆ ಸಿಕ್ಕಬೇಕು ಎಂದು ಭಾಷಣ ಮಾಡಿದ್ದಕ್ಕಾಗಿ ಮುನಿರಾಮಯ್ಯನವರಿಗೆ ಅವರ ಪಕ್ಷದ ಸರ್ಕಾರವೇ ಆರು ತಿಂಗಳ ಕಾಲ ಜೈಲಿನಲ್ಲಿ ಆತಿಥ್ಯ ನೀಡಿ ಪುರಸ್ಕರಿಸಿತು.

ತಮ್ಮ ಪಕ್ಷದ ಅಧಿಕಾರಸ್ಥರೇ ನೀಡಿದ ಆತಿಥ್ಯವನ್ನು ಉಂಡ ಕಾಂಗ್ರೆಸ್ಸಿಗರು, 20 ಅಂಶಗಳ 'ಸಮಾಜವಾದಿ' ಕಾರ್ಯಕ್ರಮದ ಫಲವನ್ನು ಉಂಡು ಹೊಟ್ಟೆ ತುಂಬಿದ್ದ ಇಂಡಿಯನ್ನರು ಇಂದಿರಾಗಾಂಧಿಯವರನ್ನು 1977ರ ಲೋಕಸಭಾ ಚುನಾವಣೆಯಲ್ಲಿ ಮನೆಗೆ ಕಳಿಸಿದರು.

ಪ್ರಜಾಪ್ರಭುತ್ವ ಹಕ್ಕುಗಳ ಪುನರ್ ಸ್ಥಾಪನೆ, ಶ್ರೀಮಂತ ಮತ್ತು ಬಡವರ ನಡುವಿನ ಅಗಾಧ ಅಂತರವನ್ನು ಶೇ 10 : 1ಕ್ಕೆ ಇಳಿಸುವುದು, ನಿರುದ್ಯೋಗವನ್ನು ಹತ್ತೇ ವರ್ಷಗಳಲ್ಲಿ ತೊಡೆದು ಹಾಕುವುದು, ನಾಡಿನ ಎಲ್ಲ ಹಳ್ಳಿಗಳ ಸಮಗ್ರ ಅಭಿವೃದ್ಧಿ ಮುಂತಾದ ಆಶ್ವಾಸನೆಗಳನ್ನು ಕೊಟ್ಟ ಜನತಾ ಪಕ್ಷವನ್ನು ಮುಗ್ಧ ಜನ ನಂಬಿದರು-ಗದ್ದುಗೆಯಲ್ಲಿ ಕೂರಿಸಿದರು. ತಮ್ಮ ನಾಯಕರನ್ನು-ಸಂಗಾತಿಗಳನ್ನು ಇಂದಿರಾಗಾಂಧಿಯ ಜೈಲುಗಳಿಂದ ಬಿಡುಗಡೆ ಮಾಡಿದ ಜನತಾ ಸರ್ಕಾರವು ತಮ್ಮ ಕಷ್ಟ-ಸುಖಗಳನ್ನೂ ಚೆನ್ನಾಗಿ ಗಮನಿಸುತ್ತದೆಂದು ಬಹುಸಂಖ್ಯಾತ ಭಾರತೀಯರು ಸಹಜವಾಗಿ ಅಂದುಕೊಂಡಂತೆ ತಾತಗುಣಿ ಎಸ್ಟೇಟಿನ ಕಪ್ಪು ಜನರೂ ಅಂದುಕೊಂಡರು. ಆದರೆ ಆಗಿದ್ದೇ ಬೇರೆ. ಜನತಾ ಸರ್ಕಾರ ತಾನೂ ದೃಢವಾಗಿ ನಿಲ್ಲಲಿಲ್ಲ. ಜನಕೋಟಿಗೂ ಮಣ್ಣು ತಿನ್ನಿಸಿತು.

ಜನತಾಪಕ್ಷದ ಸರ್ಕಾರವೇ ಮಣ್ಣು ತಿಂದ ಮೇಲೆ ಬಡ ಜನತೆ ಅನ್ನ ತಿನ್ನುವುದೆಂತು ?

"ಕಾಂಗ್ರೆಸ್ಸು-ಜನತಾ... ಯಾವುದೂ ನಿಮ್ಮ ದಾರಿಯಲ್ಲ. ಹೋರಾಟವೇ ನಿಮ್ಮ ದಾರಿ" ಎಂದು ರೈತಸಂಘ ಹಾಗೂ ಕಾರ್ಮಿಕ ಸಂಘ ಕೊಟ್ಟಿದ್ದ ಘೋಷಣೆಗಳು ಮತ್ತೆ ಮತ್ತೆ ಕಪ್ಪು ಜನರ ಮನದಲ್ಲಿ ನೆನಪಾಗತೊಡಗಿದವು. ಆ ಘೋಷಣೆಗಳಲ್ಲಿ ಸತ್ಯ ಕಂಡ ಬಡ ಜನರಿಗೆ ಹೊಸ ಶಕ್ತಿ ಬಂದಂತಾಯಿತು, ಹೋರಾಟಕ್ಕಿಳಿದರು. ಇಂದಿಗೆ ಹತ್ತು ತಿಂಗಳ ಹಿಂದೆ ಮುಷ್ಕರ ಶುರುಮಾಡಿದರು. ಮಾಮೂಲಿನಂತೆ ಮಾಲೀಕರ ರಕ್ಷಣೆಗೆಂದು ಸರ್ಕಾರ ಕಳುಹಿಸಿದ ಪೋಲೀಸ್ ಪಡೆ ಈಗಲೂ ಎಸ್ಟೇಟ್ ದ್ವಾರದಲ್ಲೇ ಬಿಡಾರ ಹೂಡಿದೆ.

ಮುಷ್ಕರ ನಿರತ ಕೂಲಿಗಾರರನ್ನು ನಾಲ್ಕು ತಿಂಗಳಾದರೂ ಯಾರೂ ಮಾತನಾಡಿಸಲಿಲ್ಲ. ರಾಜಧಾನಿಗೆ ಹತ್ತು ಮೈಲಿಗಳಷ್ಟು ಸಮೀಪದಲ್ಲಿದ್ದ ಕೂಲಿಗಾರರು, ಸರ್ಕಾರದ ಅಂದಿನ ದೊರೆ ದೇವರಾಜ ಅರಸರಲ್ಲಿ ತಮ್ಮ ದುಃಖ ದುಮ್ಮಾನಗಳನ್ನು ಹೇಳಿಕೊಳ್ಳಲು ಕೆಂಬಾವುಟಗಳನ್ನು ಹಿಡಿದು ಕಳೆದ ಡಿಸೆಂಬರ್ ಐದರಂದು ಬಂದರು. ಮಧ್ಯಂತರ ಲೋಕಸಭಾ ಚುನಾವಣೆಯ ಗಡಿಬಿಡಿಯಲ್ಲಿದ್ದ ಅರಸರಿಗೆ ಕಪ್ಪು ಜನರ ಕಷ್ಟ ಕೇಳಲು ಸಮಯ ಸಿಕ್ಕಲಿಲ್ಲ.

'ನ್ಯಾಯಕ್ಕಾಗಿ ಬಂದ ನಾವು ನ್ಯಾಯ ಸಿಕ್ಕುವವರೆಗೆ ಮರಳುವುದಿಲ್ಲ' ಎಂದು ಶಪಥ ಗೈದ ನೂರಿಪ್ಪತ್ತು ದಲಿತ ಕುಟುಂಬಗಳು ಕಬ್ಬನ್‌ಪಾರ್ಕಿನಲ್ಲಿ ಕುಂತರು. ಬರಿಗೈನಲ್ಲಿ ಬಂದಿದ್ದ ಇವರಿಗೆ ಡಿಸೆಂಬರ್ ಚಳಿಯು ವಿನಾಯಿತಿ ಕೊಡಲಿಲ್ಲ. ಹಾಲುಣ್ಣುವ ಹಸುಳೆಗಳು ಗಡಗಡ ನಡುಗುತ್ತಿರುವುದನ್ನು ಹರಿಜನ ಮಹಿಳೆಯರು ತಮ್ಮ ಹರಿದ ಸೀರೆಗಳಿಂದ ಕವಚಿ ತಪ್ಪಿಸಲು ಪ್ರಯತ್ನಿಸಿದರು. ಮರುಗಿದ ತರುಣನೊಬ್ಬ ಅರ್ಧ ಗಂಟೆಯೊಳಗೆ ನಾಲ್ಕು ಬ್ಯಾನರುಗಳನ್ನು ಸಂಪಾದಿಸಿ ತಂದ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಕರ್ನಾಟಕ ಪ್ರಾಂತ ರೈತ ಸಂಘ, ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ ಎಂಬ ಕೆಂಪಕ್ಷರಗಳ ಬಿಳಿಯ ಬ್ಯಾನರುಗಳು ಅಲ್ಲಲ್ಲೇ ತೂತಾಗಿದ್ದವು. ಮುದಿಕೆ ಮುದಿಕೆಯಾದ ಬ್ಯಾನರುಗಳಲ್ಲಿ ಮಕ್ಕಳು ನಿದ್ದೆ ಹೋದವು.

ಹರಿಜನರ, ಅಲ್ಪಸಂಖ್ಯಾತರ, ಬಡವರ ಉದ್ಧಾರ ಮತ್ತು ಸುಭದ್ರ ಸರ್ಕಾರದ ಭರವಸೆಕೊಟ್ಟ ಇಂದಿರಾ ಕಾಂಗ್ರೆಸ್ ಪಕ್ಷವನ್ನೇ ಕರ್ನಾಟಕ ಜನ ಆರಿಸಿ ಕಳಿಸಿತು. ಚುನಾವಣೆ ಜರುಗಿದ್ದು ಲೋಕಸಭೆಗೆ. ಅಲ್ಲಿ ಗೆದ್ದಿದ್ದು ಇಂದಿರಾಗಾಂಧಿ. ಸೋತು ಹೋದ ಅರಸರು ರಾಜೀನಾಮೆ ಕೊಟ್ಟರು. ಇವರ ಜೊತೆಗಿದ್ದ ಶಾಸಕರನ್ನು ಸೆಳೆದುಕೊಂಡು ಗುಂಡೂರಾಯರು ರಾಜ್ಯದಲ್ಲಿ 'ಸುಭದ್ರ' ಸರ್ಕಾರ ರಚಿಸಿದರು!

ಇಷ್ಟೆಲ್ಲಾ ದೇಶೋದ್ಧಾರದ ಕೆಲಸಗಳಾಗುತ್ತಿರುವಾಗ ತಮ್ಮ ಅಹವಾಲನ್ನು ಕೇಳಲು ಮಂತ್ರಿ-ಶಾಸಕರಿಗೆ ಬಿಡುವಿರುವುದಿಲ್ಲ ಎಂಬುದನ್ನು ಅರಿತಿದ್ದ ಬಡಜನರು ಕಬ್ಬನ್‌ಪಾರ್ಕಿನಲ್ಲಿ ಕುಳಿತೇ ಇದ್ದರು.

ಬಹಳ ಕಾಲದಿಂದ ಮೌನವಾಗಿ ಕುಳಿತಿದ್ದ ಕಪ್ಪು ಜನರ ಸಮಸ್ಯೆ ಕುರಿತು ಕಮ್ಯುನಿಸ್ಟ್ ಗೆಳೆಯ ಕಕ್ಕಿಲ್ಲಾಯ ಮತ್ತು ಸಮಾಜವಾದಿ ಸನ್ಮಿತ್ರ ವೆಂಕಟರಾಮ್ ಅವರು ಮಾರ್ಚ್ 22ರಂದು ಶಾಸನ ಸಭೆಯಲ್ಲಿ ಪ್ರಶ್ನೆ ಕೇಳಿದರು.

ಸಮಸ್ಯೆ ಇದೆ ಎಂದು ಸರ್ಕಾರಕ್ಕೆ ಗೊತ್ತು...... ಸಮಸ್ಯೆಯ ಪರಿಹಾರಕ್ಕೆಂದು ದೂರದ ದಿಲ್ಲಿಗೆ ಅಧಿಕಾರಿಯನ್ನು ವಿಮಾನದಲ್ಲಿ ಕಳಿಸಿದ್ದೇವೆಂದು ಸರ್ಕಾರ ಉತ್ತರ ಕೊಟ್ಟಿತು. ದಿಲ್ಲಿಗೆ ಹಾರಿದ ಅಧಿಕಾರಿ ವಾಪಸಾದನೋ ಇಲ್ಲವೋ, ಸಮಸ್ಯೆಗೆ ಪರಿಹಾರ ಸಿಕ್ಕಿತೋ ಇಲ್ಲವೋ ಯಾವುದೂ ಗೊತ್ತಾಗಲಿಲ್ಲ, ಏಪ್ರಿಲ್ ಇಪ್ಪತ್ತಾಯಿತು. ಬಡ ಜನರು ಕುಳಿತೇ ಇದ್ದರು. ಬೆಂಗಳೂರಿನ ದುಡಿಯುವ ಜನರಲ್ಲಿ ಕೆಲವರು ಮುಂದೆ ಬಂದು ಮೌನದಿಂದ ಕುಂತಿದ್ದ ಕಪ್ಪು ಜನರನ್ನು ಮಾತಾಡಿಸಿದರು. ಇವರ ಕಷ್ಟ ಸುಖ ಕೇಳಿದರು, ತಮ್ಮ ಕೈಲಾದ ನೆರವು ನೀಡಿದರು.

ಕುಳಿತು ಉಣ್ಣಬೇಕಾದ ಪರಿಸ್ಥಿತಿ ಬಂದಿದ್ದ ನೂರಿಪ್ಪತ್ತು ಮಂದಿಗೆ ಯಾರು ಎಷ್ಟು ದಿನ ಅನ್ನ ಕೊಡಲು ಸಾಧ್ಯ? ಕೂಲಿ ಜನಗಳ ಹಸಿವು ಅವರನ್ನು ಬೆಂಗಳೂರಿನ ಲಕ್ಷಾಂತರ ನಾಗರೀಕರ ಬಳಿಗೆ ದೂಡಿತು. ತಮ್ಮ ಸ್ಥಿತಿಯನ್ನು ಹೇಳಿಕೊಳ್ಳುವ ಕರಪತ್ರಗಳನ್ನು ಒಂದು ಕೈಲಿ, ನಿಧಿ ಡಬ್ಬಿಗಳು ಮತ್ತೊಂದು ಕೈಯ್ಯಲ್ಲಿ ಹಿಡಿದು ಬೀದಿಗೆ ಬಂದರು.

ಇವರ ಕೈಗಳಲ್ಲಿದ್ದ ಕನ್ನಡ ಭಾಷೆಯ ಕರ ಪತ್ರಗಳು ರಾಜ್ಯ ಸರ್ಕಾರ ಭಿಕ್ಷಾಟನಾ ನಿರ್ಮೂಲನ ಇಲಾಖೆಗೆ ಕಾಣಲಿಲ್ಲವೊ ಅಥವ ಅರ್ಥವಾಗಲಿಲ್ಲವೊ ಗೊತ್ತಾಗಲಿಲ್ಲ. ಬೆಂಗಳೂರಿನ ಹೊರವಲಯದಲ್ಲಿರುವ ಭಿಕ್ಷುಕರ ಕಾಲೋನಿಗೆ ಒಯ್ಯಲ್ಪಟ್ಟ ಕಪ್ಪು ಜನರನ್ನು ಬಿಡಿಸಿಕೊಂಡು ಬರಲು ರೈತಸಂಘವು 12 ಮೈಲಿಗಳ ಪಾದ ಯಾತ್ರೆ ಮಾಡಬೇಕಾಯಿತು.

'ದುಡಿದು ಬದುಕಲಾರದೆ ಏನೇನೋ ನಾಟಕ ಮಾಡಿ ಜೀವನ ಮಾಡುತ್ತಾರೆ, ಕಿರಿ ವಯಸ್ಸಿನ ಈ ಹೆಣ್ಣುಗಳು ಮೈ ಮಾರಿ ಜೀವಿಸಬಹುದಲ್ಲ'-ಮೈಸೂರು ಬ್ಯಾಂಕ್ ಚೌಕದ ಬಳಿ ಕರ ಪತ್ರ ನೀಡಿ

ಸಹಾಯ ಕೇಳಿದ ತರುಣಿಯೋರ್ವಳನ್ನು ದಿಟ್ಟಿಸಿ ನೋಡುತ್ತಾ ಕಾರ್ ಬಿಡುತ್ತಿದ್ದವನೊಬ್ಬ ತನ್ನ ಗೆಳೆಯನಿಗೆ ಇಂಗ್ಲೀಷಿನಲ್ಲಿ ಹೇಳಿದ ಮಾತುಗಳಿವು.

ಚಳಿಗಾಲ ಕಳೆಯಿತು. ಬೇಸಿಗೆ ಬಂತು. ದಿನಗಳೆದಂತೆ ಕಪ್ಪು ಜನಕ ಬೇನೆ ಜಾಸ್ತಿಯಾಗತೊಡಗಿತು. ಊಟವಿಲ್ಲದೆ ಸಾಯುವುದು ಬೇಡ. ಆದರೆ ಸೋತು ಶರಣಾಗುವುದೂ ಬೇಡ ಎಂದು ನಿರ್ಧರಿಸಿದ ಕೂಲಿಗಾರರು ಜೈಲಿಗೆ ಹೋಗಲು ಸಿದ್ಧರಾದರು

ಮುಖ್ಯಮಂತ್ರಿಗಳ ಮನೆಯ ಮುಂದೆ ಆಮರಣಾಂತ ಉಪವಾಸ ಸತ್ಯಾಗ್ರಹ ಹೂಡಲು ಏಪ್ರಿಲ್ 22ರಂದು ಹೊರಟರು. ಹರಿಜನರನ್ನು ಹಸಿವಿನಿಂದ ಸಾಯಲು ಬಿಡಬಾರದೆಂದೋ ಏನೊ ಸರ್ಕಾರ ಇವರನ್ನು ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಸೇರಿಸಿತು. ಉದ್ದೇಶಿತ ಕಾರ್ಯಕ್ರಮದ ಅನುಸಾರ ರೈತ ಸಂಘದ ನಾಯಕ ಜಗನ್ನಾಥ ಜೈಲಿನಲ್ಲೇ ಉಪವಾಸ ಆರಂಭಿಸಿದ. ಆದರೆ ಈ ಸಂಗತಿಯನ್ನು ಆದೇಕೊ ತನ್ನ ಸಂಗಾತಿಗಳಿಗೇ ಅತ ತಿಳಿಸಲಿಲ್ಲ ನ್ಯಾಯಾಲಯವು ಏಪ್ರಿಲ್ 29ರಂದು ಇವರನ್ನು ಬಿಡುಗಡೆ ಮಾಡಿತು,

ಕೂಲಿಗಾರರೆಲ್ಲ ಜೈಲಿನಲ್ಲಿದ್ದ ಕ್ಲುಪ್ತ ಸಮಯದಲ್ಲಿ ಎಸ್ಟೇಟ್ ಮಾಲೀಕರು ಕ್ರಿಯಾಶೀಲರಾದರು. ಅಕ್ಕಪಕ್ಕದ ಹಳ್ಳಿಗಳಿಂದ ಕೂಲಿ ಜನರನ್ನು ಐದು ರೂ. ಕೂಲಿಯ ಮೇಲೆ ಕೆಲಸಕ್ಕೆ ಕರೆದರು. ಕಳೆದ 32 ವರ್ಷಗಳ ಸ್ವತಂತ್ರ ಭಾರತದಲ್ಲಿ ಬಡವರ ಉದ್ಧಾರದ ಕಾರ್ಯ ಆಗಿರುವ ಈ ನಾಡಿನ ಹಳ್ಳಿಯ ಮುಗ್ಧ ಜನ ಐದು ರೂ. ಕೂಲಿಗಾಗಿ ನಾ ಮುಂದು ತಾ ಮುಂದು ಎಂದು ಬಂದರು.

ಅದೃಷ್ಟವಶಾತ್ ಜೈಲುವಾಸ ಮುಗಿದ, ಮುಷ್ಕರ ನಿರತ ಕಾರ್ಮಿಕರು ತಮ್ಮ ಹಳ್ಳಿಗಳಿಗೆ ತೆರಳಲು ನಿರ್ಧರಿಸಿದರು. ತಮ್ಮ ಕಣ್ಣೀರ ಬದುಕಿನ ಕಥೆಯನ್ನು, ದೀರ್ಘ ಕಾಲದ ಕಠಿಣ ಹೋರಾಟದ ಕಥೆಯನ್ನು ಹಳ್ಳಿಗಳಲ್ಲಿ ಹೇಳಿ, ಹಳ್ಳಿಯ ರೈತರ-ಬಡಜನರ ಬೆಂಬಲಕೇಳಲು ಮುಂದಾದರು.

ಮೇ ಏಳು, ತಲಗಟ್ಟಪುರದಿಂದ ಕಗ್ಗಲಿಪುರಕ್ಕೆ ಐದು ಮೈಲುಗಳ ಅಂತರ, ಈ ದಾರಿ ಸವೆಸುವಾಗ ರಸ್ತೆಯ ಇಬ್ಬದಿಗಳಲ್ಲಿ ಕೂಲಿ ಜನ ಕೆಲಸ ಮಾಡುತ್ತಿದ್ದ ಎಸ್ಟೇಟು ಸಿಗುತ್ತದೆ. ರಣರಣ ಉರಿಯುವ ಬಿಸಿಲಿನಲ್ಲಿ ಮಧ್ಯಾಹ್ನ 2 ಗಂಟೆಗೆ ಮೆರವಣಿಗೆ ಹೊರಟಿತು ಬಹು ಜನರ ಕೈಯ್ಯಲ್ಲಿ ಕೆಂಬಾವುಟಗಳು, 'ಬೆಂಗಳೂರು ಜಿಲ್ಲಾ ರೈತಸಂಘ' ಬ್ಯಾನರ್ ಹಿಡಿದ ಇಬ್ಬರು ಮಹಿಳೆಯರು ಮೆರವಣಿಗೆಯ ಪ್ರಥಮದಲ್ಲಿ.

ರಸ್ತೆಯುದ್ದಕ್ಕೂ ಸಿಕ್ಕಿದ ಹಳ್ಳಿಗರಿಗೆ ತಮ್ಮ ಗೋಳನ್ನು-ಬೇಡಿಕೆಗಳನ್ನು ಕೂಗಿಕೂಗಿ ಹೇಳಿದರು. ಎಲ್ಲರೂ ಕೇಳಿದರು. ಅನುಕಂಪವಿದ್ದ ಕೆಲವರು ಮೆರವಣಿಗೆಯಲ್ಲಿ ಸೇರಿಕೊಂಡರು. ಕಾದೆಣ್ಣೆಯಂತೆ ಸುಡುತ್ತಿದ್ದ ಟಾರ್ ರಸ್ತೆಯ ಮೇಲೆ ಮಹಿಳೆಯರ ಕೋಮಲ ಪಾದಗಳು, ಬದುಕಿನುದ್ದಕ್ಕೂ ಬರಿಗಾಲಲ್ಲೇ ಇರುವ ಹಳ್ಳಿಗರ ಕೆಲವು ಕಾಲುಗಳಲ್ಲಿ ಮೆಟ್ಟುಗಳಿದ್ದವು. ಉರಿ ಬಿಸಿಲಿಗೆ ಜಿನುಗಿದ್ದ ಟಾರ್‌ಗೆ ಅಂಟಿಕೊಂಡ ಕೆಲವರ ಚಪ್ಪಲಿಗಳು ಕಿತ್ತು ಬಂದವು. ಪಿನ್ನು ಹಾಕಿ ರಿಪೇರಿ ಮಾಡಿಕೊಂಡು ಕೆಲವರು ಮುನ್ನಡೆದರೆ ಮತ್ತೆ ಕೆಲವರು ಕೈಯಲ್ಲಿ ಹಿಡಿದೇ ನಡೆದರು. ಪಟ್ಟಣದಿಂದ ಬಂದಿದ್ದ ಹಲವಾರು ಸಂಗಾತಿಗಳ ಎಲ್ಲ ಅಂಗಿಗಳೂ ಬೆವರಿನಿಂದ ತೊಯ್ದಿದ್ದವು. ಮಾರ್ಗ ಮಧ್ಯದಲ್ಲಿ ಮಳೆ ಬಂತು. ಮೆರವಣಿಗೆಕಾರರು ಓಡಿಹೋಗಿ ಮರಗಳ ಕೆಳಗೆ ನಿಂತರು. ಸೀರೆಗಳ ಸೆರಗುಗಳು, ವಲ್ಲಿ,ಬಟ್ಟೆಗಳು, ದುಪ್ಪಟಿ, ಕರ್ಚೀಪು, ಬಾವುಟ, ಬ್ಯಾನರುಗಳು ಎಲ್ಲರ ತಲೆಗಳನ್ನೇರಿದವು.

ಮೆರವಣಿಗೆ ಉದ್ದಕ್ಕೂ ಹಿಂದೆ ಮುಂದೆ ಬಂದ ಪೋಲೀಸ್ ವ್ಯಾನುಗಳಲ್ಲಿದ್ದವರಲ್ಲಿ ಒಬ್ಬ ಕೆಳಗಿಳಿದ. ಕರ್ಚೀಪನ್ನು ತಲೆ ಮೇಲೇರಿಸುತ್ತಾ ನಡೆದ. ಪ್ಯಾಂಟಿನ ಗುಂಡಿಗಳನ್ನು ಬಿಚ್ಚುತ್ತಾ ರಸ್ತೆಯ ಬದಿಯ ಪೊದೆಯೊಂದಕ್ಕೆ ಸರಾಗವಾಗಿ ನಡೆದು ಹೋದ ಅವನ ಪಾದಗಳನ್ನು ಕಪ್ಪು ಜನರು ಹೊಲೆದಿದ್ದ ಬೂಟುಗಳು ರಕ್ಷಿಸಿದವು.

ಒಂದು ಸಂಜೆ ಕಬ್ಬನ್‌ಪಾರ್ಕಿನಲ್ಲಿ ಕೂಲಿಗಾರರ ಅಡಿಗೆಯಾಗುತ್ತಿದ್ದಾಗ ಬರೊ್ರ ಅಂತ ಮಳೆಗಾಳಿ ಅರ್ಧ ಬೆಂದಿದ್ದ ಹಿಟ್ಟನ್ನೆಲ್ಲ ನೀರು ಮಾಡಿತ್ತು-ಮಣ್ಣು ಮಾಡಿತ್ತು-ಒಲೆಯಾರಿಸಿತ್ತು. ಪಟ್ಟಣಗರು ಕುಡಿದು ಎಸೆದಿದ್ದ ಎಳನೀರಿನ ಚಿಪ್ಪುಗಳು ನೆಂದವು. ನಾಳೆಗೆ ಹೇಗೆ ಎಂದು ಯೋಚಿಸುತ್ತ ತಲೆ ಮೇಲೆ ಕೈಯೊತ್ತು ಕುಳಿತಿದ್ದ ಮಹಿಳೆಯರ ಅಂದಿನ ಮುಖಗಳು ಆದೇಕೊ ನೆನಪಾಗಿ ಕಣ್ಣು ತೇವಗೊಂಡವು. ಆದೇ ಮಹಿಳೆಯರು ಇಂದೂ ನೆನೆಯುತ್ತಿದ್ದಾರೆ,

ಕಗ್ಗಲೀಪುರದಲ್ಲಿರುವ ಹಿಟ್ಟಿನ ಗಿರಣಿಯಿಂದ ರಾಗಿ ಬೀಸಿಕೊಂಡು ತರೋಣವೆಂದು ಬಂದಿದ್ದ ರೈತನೊಬ್ಬನ ರಾಗಿಯೆಲ್ಲಾ ನೆಂದು ಹಣ್ಣಾದವು. ರಾತ್ರಿ ಬರಿ ಹೊಟ್ಟೆಯಲ್ಲಿ ಮಲಗಬೇಕಲ್ಲಪ್ಪ ಎಂಬ ಚಿಂತೆ ಮುದುಕನ ಮುಖದಲ್ಲಿ,

ಮಳೆ ನಿಂತು ಬಿಸಿಲು ಬಂತು, ಮೆರವಣಿಗೆಕಾರರು ಬಟ್ಟೆಗಳನ್ನು ಕೊಡವಿಕೊಂಡು ಹೊರಟರು. ತಮ್ಮೂರ ಬಳಿ ಮೆರವಣಿಗೆ ಬಂದಾಗ ತಮ್ಮ ಕಂಕುಳಲ್ಲಿದ್ದ ಮಕ್ಕಳನ್ನು ಮನೆಗಳಿಗೆ ಬಿಟ್ಟು ಬಂದರು ಮಹಿಳೆಯರು, ಘೋಷಣೆ ಕೂಗಿ ಬಾಯಾರಿದ್ದ ಸಂಗಾತಿಗಳಿಗೆ ನೀರು ಕೊಟ್ಟರು. ದೊಡ್ಡದಾಗಿ ಬೆಳೆದಿದ್ದ ಹುಣಿಸೆ ಮರವೊಂದು ತಂಪನ್ನಿತ್ತಿತು. ಬೀಡಿ ಸೇದುತ್ತಾ ಸುಸ್ತಾಗಿ ಕುಳಿತರು ಪಟ್ಟಣದಿಂದ ಬಂದಿದ್ದ ಸಂಗಾತಿಗಳು.

'ಟೇಮ್ಗೆ ಸರಿಯಾಗಿ ಹೋಗಬೇಕು' ಎಂದು ಹೊರಟ ಹಳ್ಳಿಗರನ್ನು ನಾವೆಲ್ಲ ಸೇರಿಕೊಳ್ಳಬೇಕಾಯಿತು.

ದಟ್ಟ ಮೋಡಗಳು ಆಕಾಶದಲ್ಲಿ. ದಾವುಗಾಲಿನಿಂದ ನಡೆದ ಮೆರವಣಿಗೆ ಸಂಜೆ 5ಕ್ಕೆ ಕಗ್ಗಲೀಪುರ ಸೇರಿತು.

ಕೆಂಬಾವುಟದ ಪಾಲ್ಗೆಯುವರು ಏನು ಹೇಳುತ್ತಾರೆ ಎಂಬುದನ್ನು ಕೇಳುವ ಕುತೂಹಲದಿಂದ ಸೇರಿದವರಂತೆ ಕಂಡ ನೂರಾರು ಜನ ಗ್ರಾಮಸ್ಥರು ಅಂಗಡಿ ಬೀದಿಯಲ್ಲಿ ಸೇರಿದ್ದರು.. ಗುಡುಗು ಮಿಂಚು ದೂರದಲ್ಲಿ. ಆತುರಾತುರವಾದ ಸಾರ್ವಜನಿಕ ಸಭೆಯ ಆರಂಭ, ದಲಿತ ಸಂಘರ್ಷ ಸಮಿತಿಯ ತರುಣರು ದಲಿತ ಕವಿ ಸಿದ್ದಲಿಂಗಯ್ಯನವರ ಹಾಡುಗಳನ್ನು ಹೇಳಿದರು.

'ದೇಶದಲ್ಲಿ ಐದು ಪಂಚವಾರ್ಷಿಕ ಯೋಜನೆಗಳು ಮುಗಿದಿದ್ದರೂ ನಮ್ಮಲ್ಲಿನ ಶೇ50ರಷ್ಟು ಜನ ದಟ್ಟದಾರಿದ್ರ್ಯದಲ್ಲೇ ಇದ್ದಾರೆ. ಇದಕ್ಕೇನು ಕಾರಣ? ಈ ದೇಶಕ್ಕೆ ಬಡತನ ತಂದು ಹಾಕಿದವರಾರು' ಈ ಪ್ರಶ್ನೆಗಳನ್ನು ಜನರಿಗೇ ನೇರವಾಗಿ ಕೇಳಿದರು ಪ್ರಾಂತ ರೈತ ಸಂಘದ ಅಧ್ಯಕ್ಷ ಕಾಂ. ಎಚ್. ಮುಗುವಾಳಪ್ಪ

ದೇವಿಕಾರಾಣಿ ಎಸ್ಟೇಟಿನ ದಲಿತರ ಬೇಡಿಕೆ ಈಡೇರಿಸದಿದ್ದರೆ ಎಸ್ಟೇಟ್ ಭೂಮಿಯನ್ನು ಆಕ್ರಮಣ ಮಾಡಲು ಪ್ರಾಂತ ರೈತಸಂಘ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತೆ ಎಂಬ ಎಚ್ಚರಿಕೆಯನ್ನು ಕೊಟ್ಟ ರೈತ ಮುಖಂಡರು ತಮ್ಮ ಭಾಷಣವನ್ನು ಮೊಟಕು ಮಾಡಿದರು.

ಕೂಲಿಗಾರರಿಗೆ ಇರುವಷ್ಟೇ ಅಗಾಧ ಸಮಸ್ಯೆಗಳು-ಕಷ್ಟಗಳು ರೈತರಿಗೂ ಇವೆ. ರೈತರೂ ಸಹ ಸಂಘ ಕಟ್ಟಿಕೊಂಡು ಹೋರಾಡಬೇಕೆಂಬ ಕಳಕಳಿಯ ಮನವಿ ಬಂತು ಬೆಂಗಳೂರು ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಪಿ. ಜಗನ್ನಾಥರಿಂದ. ಪ್ರಸ್ತುತ ನಡೆಯುತ್ತಲಿರುವ ದೇವಿಕಾರಾಣಿ ಎಸ್ಟೇಟಿನ ದಲಿತರ ನ್ಯಾಯವಾದ ಹೋರಾಟಕ್ಕೆ ಬೆಂಬಲ ಕೊಡಿ ಎಂದು ಎಲ್ಲ ರೈತ ಬಾಂಧವರಿಗೆ ಅವರು ಮನವಿ ಮಾಡಿದರು.

'ಆರು ವರ್ಷಗಳಷ್ಟು ಹಳೆಯದಾದ ಹೋರಾಟ ನಮ್ಮದು, ಕಳೆದ ಹತ್ತು ತಿಂಗಳಿನಿಂದ ಮುಷ್ಕರ ಹೂಡುತ್ತಿದ್ದೇವೆ. ರೈತರು – ಕಾರ್ಮಿಕರು ಎಂದೂ ಸೋತಿಲ್ಲ. ಎಲ್ಲಿಯೂ ಸೋತಿಲ್ಲ, ಸೋಲೋಲ್ಲ. ಸಾಯ ಗಸಾಯ ಹೋರಾಡಿ ನಾವು ಗದ್ದೇ ಗೆಲ್ಲುತ್ತೇವೆ' ಎಂದು ರೈತ ಸಂಘದ ನಾಯಕರು ಘೋಷಿಸಿದರು. ಈ ನಾಯಕನ ಆದಮ್ಯ ಆಶಾವಾದ ಕೂಲಿಗಾರರಿಗೆ ಮತ್ತಷ್ಟು ಧೈರ್ಯ ತುಂಬಿತು.

ಕಪ್ಪು ಜನರ ದೀರ್ಘಕಾಲದ ಈ ಹೋರಾಟ ಒಂದು ನೋವಿನ ಕಥೆ ಮಾತ್ರವಲ್ಲ, ಇದೊಂದು ವಾಸ್ತವ, ಇವರ ಬೇಡಿಕೆಗಳು ಮಾತ್ರ ಇನ್ನೂ ಕನಸಾಗೇ ಉಳಿದಿವೆ. ಈ ಕನಸು ನನಸಾಗಲು, ಇವರ ಕಣ್ಣೀರ ಕಥೆ ಕೊನೆಯಾಗಲು ರಾಜ್ಯದ ಎಲ್ಲಾ ಕಾರ್ಮಿಕ, ರೈತ ಸಂಘಟನೆಗಳು ಮತ್ತು ನೋವುಂಡವರ ಪಕ್ಷಪಾತಿಗಳು ಕಾರ್ಯಕ್ರಮ ಹಾಕಿಕೊಂಡು ಕ್ರಿಯೆಗಿಳಿಯುವುದೊಂದೇ ದಾರಿ ಎಂಬ ಯೋಚನೆ ಶುರುವಾಯಿತು. ಎಲ್ಲಿಲ್ಲದ ಗುಡುಗು, ಸಿಡಿಲು, ಮಿಂಚು, ಮಳೆಗಾಳಿ ಆರಂಭವಾಯಿತು.

—ಶಂಕರ ಲಾಲಾಪುರ

○

ವ್ಯವಸ್ಥೆಯ ವಿರುದ್ಧ ರಾಜ್ಯದಲ್ಲಿ ಯುವಜನ ಸಂಘಟನೆ

ದೇಶದ ಯುವಜನಾಂಗವನ್ನು ಕಾಡುತ್ತಿರುವ ಕೊಳೆತ ವ್ಯವಸ್ಥೆಯ ಹಳೆಯ ಮೌಲ್ಯಗಳನ್ನು ಕಿತ್ತುಹಾಕಿ ಹೊಸ ಮೌಲ್ಯಗಳನ್ನು ರೂಪಿಸಲು ರಾಜ್ಯದ ನಾನಾ ಮೂಲೆಗಳಿಂದ ಬಂದ ಯುವಜನರು ಕಾರ್ಯಕ್ರಮ ಒಂದನ್ನು ರೂಪಿಸಿದ್ದಾರೆ.

ಏಪ್ರಿಲ್ 20, 21, 22 ಮತ್ತು 23ನೇ ತಾರೀಖು ರಾಯಚೂರಿನಲ್ಲಿ ನಡೆದ ಈ ಸಮಾವೇಶ ರಾಜ್ಯದಲ್ಲಿ ಬಲಿಷ್ಠ ಯುವಜನ ಸಂಘಟನೆಯನ್ನು ಕಟ್ಟುವ ಉದ್ದೇಶ ಹೊಂದಿದ್ದು ಮುಂದೆ ಅಖಿಲಭಾರತ ಮಟ್ಟದಲ್ಲಿ ಆಗಲಿರುವ ಸಂಘಟನೆಯ ಒಂದು ಘಟಕವಾಗಲಿದೆ.

ಸ್ವಾಗತ ಸಮಿತಿಯ ಅಧ್ಯಕ್ಷ ಕಾಂ. ಪುರುಷೋತ್ತಮ ಕಲಾಲಬಂಡಿಯವರು ಪ್ರತಿನಿಧಿಗಳನ್ನು ಸ್ವಾಗತಿಸಿ, ಯುವ ಜನತೆಯ ಜವಾಬ್ದಾರಿ, ರಾಜ್ಯಮಟ್ಟದ ಸಂಘಟನೆಗಾಗಿ ಸಮಾವೇಶದ ಅಗತ್ಯ, ಮಹತ್ವಗಳನ್ನು ವಿವರಿಸಿ, ಇದಕ್ಕಾಗಿಯೇ ರಾಯಚೂರಿನ ಸ್ನೇಹಿತರು; ಸಂಗಾತಿಗಳು ಸಮಾವೇಶ ನಡೆಸುವ ಜವಾಬ್ದಾರಿ ತೆಗೆದುಕೊಂಡಿದ್ದು ಎಂದು ಹೇಳಿದರು.

ನಂತರ ಸಮಾವೇಶದ ನಾಲ್ಕು ದಿನದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಲು ಕಾಂ. ಎಂ. ಇಕ್‌ಬಾಲ್ ಹುಸೇನ್, ಕಾಂ. ಶರಣ ಬಾಲೀಪಾಟೀಲ್ ರಾಯಚೂರು, ಕಾಂ ಶಂಕರ್ ಕುಂಬಾಪುರ ಹಾಗೂ ಕಾಂ. ಶೀಲಾ ಗುಲ್ಬರ್ಗಾ ಇವರುಗಳನ್ನೊಳಗೊಂಡ ಅಧ್ಯಕ್ಷ ಮಂಡಳಿಯನ್ನು ರಚಿಸಲಾಯಿತು.

ಅಧ್ಯಕ್ಷ ಮಂಡಳಿಯ ಅಧ್ಯಕ್ಷತೆ ವಹಿಸಿದ್ದ ಎಂ. ಇಕ್‌ಬಾಲ್ ಹುಸೇನ್ ಮಾತನಾಡುತ್ತಾ ಗುಂಡೂರಾಯರ 'ಮಣ್ಣಿನ ಮಕ್ಕಳು' 'ಅಸ್ಸಾಂ ಕೇವಲ ಅಸ್ಸಾಮಿಗಳಿಗೆ' ಮುಂತಾದ ವಾದಗಳು ಕೇವಲ ದೇಶವನ್ನು ಛಿದ್ರಗೊಳಿಸುವ ವಾದಗಳಾಗಿದ್ದು, ಬಡತನ ನಿರುದ್ಯೋಗಗಳಿಂದ ಕಂಗಾಲಾಗಿರುವ ಯುವಜನತೆಯನ್ನು ದಿಕ್ಕುಗೆಡಿಸುತ್ತವೆ, ಇಂತಹ ಹೊಣೆಗೇಡಿ, ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಲು ಈ ಸಮಾವೇಶ ಒಂದು ವೈಜ್ಞಾನಿಕ ಕಾರ್ಯಕ್ರಮ ರೂಪಿಸಲು ಸಾಧ್ಯವಾಗುತ್ತದೆ ಎಂಬ ನಂಬಿಕೆಯನ್ನು ವ್ಯಕ್ತಪಡಿಸಿದರು.

ಸಮಾವೇಶಕ್ಕೆ ಶುಭಾಶಯಗಳನ್ನು ಕೋರಿ ಹೈದರಾಬಾದ್ ಕರ್ನಾಟಕ ಪ್ರದೇಶದ ರೈತ-ಕಾರ್ಮಿಕ ಮುಖಂಡ ಕಾಂ. ಗಂಗಾಧರ ನಮೋಶಿ, ಸಮುದಾಯದ ಶ್ರೀಕಾಂತ ಕಕ್ಕೇರಿ, ಪ್ರಗತಿಪರ ಮಹಿಳಾ ಸಂಘಟನೆಯ ಶ್ಯಾಮಲಾ ಪೂಜಾರ್, ಎಸ್. ಎಫ್. ಐ ನ ಎಸ್. ಆರ್. ಆರಾಧ್ಯ, ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘದ ಕಾರ್ಯದರ್ಶಿ ಖಮರುದ್ದೀನ್‌ಅಲಿ ಸಿ. ಪಿ. ಐ. (ಎಂ) ಮುಖಂಡ ಖಾಸ್ ಸಾಹೇಬ್ ಹಾಗೂ ದಲಿತ ಸಂಘರ್ಷ ಸಮಿತಿಯ ಸಿದ್ದಲಿಂಗಯ್ಯ ಮಾತನಾಡಿದರು,

ಕಾಂ. ಶ್ರೀರಾಮರೆಡ್ಡಿಯವರು ಯುವಜನ ಸಂಘಟನೆಯ ಸಂವಿಧಾನ, ಕಾರ್ಯಕ್ರಮದ ಬಗ್ಗೆ ಕರಡು ವರದಿ ಮಂಡಿಸಿದರು. ಮೂರನೇ ದಿನ ನಡೆದ ಕರಡು ವರದಿಯ ಚರ್ಚೆಯಲ್ಲಿ ಇಪ್ಪತ್ತೆರಡು ಪ್ರತಿನಿಧಿಗಳು ಭಾಗವಹಿಸಿದ್ದರು. ಕೆಲವೊಮ್ಮೆ ಭಾವಾವೇಶಕ್ಕೆ ಒಳಗಾಗಿ ಮಾತನಾಡುತ್ತಿದ್ದ ಪ್ರತಿನಿಧಿಗಳು, ಮತ್ತೊಮ್ಮೆ ಮುಂದಿನ ಹೋರಾಟಗಳು, ಸದ್ಯದ ಪರಿಸ್ಥಿತಿಯ ಬಗ್ಗೆ ಗಂಭೀರ ಸಲಹೆ, ಟಿಪ್ಪಣಿಗಳನ್ನು ನೀಡಿದರು. ಇಡೀ ದಿವಸ ಚರ್ಚೆ ಜೀವಂತವಾಗಿದ್ದು ಕೊನೆಯವರೆಗೂ ಆಸಕ್ತಿಯನ್ನು ಉಳಿಸಿಕೊಂಡು ಬಂತು. ಚರ್ಚೆಯಲ್ಲಿ ಬಂದ ಟೀಕೆಗಳಿಗೆ ಕಾಂ. ಶ್ರೀರಾಮರೆಡ್ಡಿಯವರು ಉತ್ತರವಿತ್ತು, ಪ್ರತಿನಿಧಿಗಳು ನೀಡಿರುವ ಕೆಲವೊಂದು ಸಲಹೆಗಳನ್ನು ಗಮನಕ್ಕೆ ತಂದುಕೊಂಡು ತಿದ್ದುಪಡಿ ಮಾಡಲಾಗಿದೆ ಎಂದು ತಿದ್ದುಪಡಿಗಳನ್ನು ಓದಿದರು. ವೈಜ್ಞಾನಿಕ ಸಮಾಜವಾದದ ದೃಷ್ಟಿಕೋನದಿಂದ ಕಾರ್ಯಕ್ರಮವನ್ನು ರೂಪಿಸಲಾಗಿದೆಯೆಂದು ಉದಾಹರಣೆಗಳ ಮೂಲಕ ಸಮರ್ಥಿಸಿದರು.

ನಂತರ ವರದಿಯನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು. ಸಂಘಟನೆಯ ಹೆಸರನ್ನು "ಪ್ರಜಾಸತ್ತಾತ್ಮಕ

(6ನೇ ಪುಟ ನೋಡಿ)

ವ್ಯವಸ್ಥೆಯ ವಿರುದ್ಧ ರಾಜ್ಯದಲ್ಲಿ ಯುವಜನ ಸಂಘಟನೆ

(5ನೇ ಪುಟದಿಂದ)

ಯುವಜನ ಸಂಘಟನೆ" ಎಂದು ಹೆಸರಿಸಲಾಯಿತು.

ರಾಜ್ಯದಾದ್ಯಂತ ಸಂಘಟನೆಯನ್ನು ಬಲಗೊಳಿಸುವ ದೃಷ್ಟಿಯಿಂದ ರಾಜ್ಯ ಮಟ್ಟದ ಸಂಘಟನಾ ಸಮಿತಿಯನ್ನು ರಚಿಸಲಾಗಿದೆ. ಅಲ್ಲದೆ ರಾಜ್ಯವನ್ನು ನಾಲ್ಕು ಭಾಗಗಳನ್ನಾಗಿ ವಿಭಾಗಿಸಿ, ನಾಲ್ವರು ಸಂಚಾಲಕರನ್ನು ಆಯ್ಕೆ ಮಾಡಲಾಗಿದೆ. ಸಂಘಟನಾ ಸಮಿತಿಯ ವಿವರಗಳು ಹೀಗಿದೆ: ಸಂಚಾಲಕರು 1. ಶ್ರೀರಾಮರೆಡ್ಡಿ (ಕೋಲಾರ) 2. ಆನಂದ ಭಂಡಾರಿ (ದ. ಕ.) 3. ಗಂಗಾಧರ ಪಲ್ಲೇದ್ (ಧಾರವಾಡ) ಹಾಗೂ 4. ಸುಭಾಶ್ ಬಾಣಿ (ಗುಲ್ಬರ್ಗ) ಸಮಿತಿಯ ಸದಸ್ಯರು: ಅವ್ಜದ್ ಹುಸೇನ್, ಶ್ರೀಶೈಲ ಪಟ್ಟಣಶೆಟ್ಟಿ (ರಾಯಚೂರು), ವೆಂಕಟನಾಗ್ (ಬೆಂಗಳೂರು) ನರಸಿಂಹೇಗೌಡ (ಮೈಸೂರು) ಎಚ್. ಕೆ. ಅಮೀರ್ ಜಾನ್ (ಹಾಸನ), ಆರ್. ಗೋಪಾಲ ನಾಯಕ್ (ಶಿವಮೊಗ್ಗ) ಐ. ಆರ್. ಪ್ರಮೋದ್ (ಕೊಡಗು) ನರಸಿಂಹಬಿರಾದರ್ (ಬೀದರ್) ಉಷಾ, ಜೆ. ಎಚ್. ಗುಜ್ಜಲ್ (ಬಳ್ಳಾರಿ) ಎಂ. ಇಕ್‌ಬಾಲ್ ಹುಸೇನ್ (ಚಿತ್ರದುರ್ಗ) ಉಮೇಶ್ ಪಿ. ನಾಯಕ್ (ಉ. ಕ.)

ಸಮಾವೇಶದ ಸಮಯದಲ್ಲೇ ರಾಯಚೂರು ಸಮುದಾಯ ನಾಟಕೋತ್ಸವವನ್ನು ಏರ್ಪಡಿಸಿ ಕು.ರಿ, ಕತ್ತಲೆದಾರಿ ದೂರ, ಬೆಳೆದವರು ನಾಟಕಗಳನ್ನು ಅಭಿನಯಿಸಿದರು. ಗಂಗಾವತಿ, ಹೊಸಪೇಟೆಯ ಯುವಕರು ಪ್ರತಿದಿನ ಸಮಾವೇಶ ಪ್ರಾರಂಭವಾಗುವುದಕ್ಕೆ ಮೊದಲು ಕ್ರಾಂತಿ ಗೀತೆಗಳನ್ನು ಹಾಡಿದರು. ಅಲ್ಲದೆ ಎರಡು ದಿನ ನಡೆದ ವಿಚಾರ ಸಂಕಿರಣ ಮಾಲೆಯಲ್ಲಿ ಮೊದಲ ದಿನ ಕವಿ ಸಿದ್ಧಲಿಂಗಯ್ಯ ಭಾಗವಹಿಸಿದ್ದರು. ಎರಡನೇ ದಿನ ನಡೆದ ಜಾತಿ ಮತ್ತು ವರ್ಗ ಹೋರಾಟದ ಬಗ್ಗೆ ನಡೆದ ಚರ್ಚೆಯಲ್ಲಿ ಹೊಸಪೇಟೆಯ ಪ್ರಾಧ್ಯಾಪಕ ಎಸ್. ಎಸ್. ಹಿರೇಮಠ ಮತ್ತು ಯಡೂರು ಮಹಾಬಲ ಭಾಗವಹಿಸಿದ್ದರು.

ಪ್ರತಿನಿಧಿಗಳಿಗೆ ಸೈದ್ಧಾಂತಿಕ ತರಬೇತಿ ನೀಡುವ ಉದ್ದೇಶದಿಂದ ಎರಡು ದಿನ ರಾಜಕೀಯ ಅರ್ಥಶಾಸ್ತ್ರ, ಸಮಾಜದ ಹುಟ್ಟು ಮತ್ತು ಬೆಳವಣಿಗೆ, ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಬೆಳೆದು ಬಂದ ದಾರಿ, ಮೊದಲಾದ ವಿಚಾರಗಳನ್ನು ಬೋಧಿಸಲಾಯಿತು. ಪ್ರತಿದಿನ ಚರ್ಚೆಗಳು, ಪ್ರಶ್ನೋತ್ತರಗಳು, ಬಂದ ಪ್ರತಿನಿಧಿಗಳಿಗೆ ತಾವು ನಡೆಯಬೇಕಾದ ದಾರಿ, ಅದರಲ್ಲೂ ಭಾರತದ ವಿಶಿಷ್ಟ ಪರಿಸ್ಥಿತಿಯ ಹಿನ್ನಲೆಯಲ್ಲಿ ಅವರ ಕರ್ತವ್ಯದ ಬಗ್ಗೆ ಹೆಚ್ಚಿನ ತಿಳುವಳಿಕೆ ಮೂಡಿಸಲು ಸಹಾಯ ಮಾಡಿತು. ಪುಸ್ತಕ ಪ್ರದರ್ಶನವನ್ನು ಸಹಾ ಏರ್ಪಡಿಸಲಾಗಿತ್ತು.

ಬಿಜಾಪುರದ ಹಿರಿಯ ಕಾರ್ಮಿಕ ಮುಖಂಡ ಕಾಂ. ಎನ್. ಕೆ. ಉಪಾಧ್ಯಾಯರು ಬಾಂಬೆ-ಕರ್ನಾಟಕ ಪ್ರದೇಶದಲ್ಲಿ ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆ, ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಕಮ್ಯುನಿಸ್ಟರು ಎದುರಿಸಿದ ಕಷ್ಟ, ನಷ್ಟ, ದೀರ್ಘ ಹೋರಾಟಗಳ ಅನುಭವಗಳನ್ನು ಹೇಳಿದರು.

ಕಾಂ. ಗಂಗಾಧರ ನಮೋಶಿಯವರು ಹಳೆಯ ಮೈಸೂರು ಪ್ರಾಂತ್ಯಕ್ಕೆ ಹಾಗೂ ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಜನರು ಅರಸೊತ್ತಿಗೆಯನ್ನು ಕಿತ್ತು ಹಾಕುವ ಸಂದರ್ಭದಲ್ಲಿ ನಡೆದುಕೊಂಡ ತದ್ವಿರುದ್ಧ ಧೋರಣೆ, ಕಮ್ಯುನಿಸ್ಟರನ್ನು ಸಾಮಾಜಿಕವಾಗಿ ದೂರ ಇಡಲು ಕಾಂಗ್ರೆಸ್ಸಿಗರು ಮಾಡಿದ ಕುತಂತ್ರ, ಈದಿನ ಪರಿಸ್ಥಿತಿಗಳನ್ನು ವಿವರಿಸಿದರು.

ವ್ಯವಸ್ಥಿತವಾಗಿ ಸಮಾವೇಶವನ್ನು ಸಂಘಟಿಸಿ ರಾಜ್ಯದಲ್ಲಿ ಯುವಜನ ಸಂಘಟನೆಯ ಉದಯಕ್ಕೆ ಕಾರಣರಾದ ರಾಯಚೂರಿನ ಗೆಳೆಯರನ್ನು ಅಧ್ಯಕ್ಷ ಮಂಡಳಿ ಅಭಿನಂದಿಸಿತು. ಘೋಷಣೆಗಳೊಂದಿಗೆ ಸಮಾವೇಶ ಮುಕ್ತಾಯವಾಯಿತು.

●

ಹೈಸ್ಕೂಲು ಪ್ರವೇಶಕ್ಕೆ ತೊಂದರೆ

ಏಳನೆಯ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ತಾವು ಓದಿದ ಶಾಲೆಗೆ ಹತ್ತಿರವಾಗಿರುವ ಹೈಸ್ಕೂಲಿನಲ್ಲಿ ಎಂಟನೇ ತರಗತಿಗೆ ಪ್ರವೇಶ ಪಡೆಯುವ ಹಕ್ಕು ಇದೆ. ಹಾಗಿದ್ದರೂ ಕೆಲವು ಹೈಸ್ಕೂಲಿನವರು ಕಡಿಮೆ ಅಂಕಗಳ ನೆಪವೊಡ್ಡಿ ಬಡಕುಟುಂಬಗಳ ಅನೇಕ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸುತ್ತಿದ್ದಾರೆ. ಮನಸ್ಸಿಗೆ ಬಂದ ರೀತಿಯಲ್ಲಿ ಹಣ ವಸೂಲು ಮಾಡುತ್ತಿದ್ದಾರೆ.

ಕೇರಳ ಸರ್ಕಾರವು ಒಂದು ಆಜ್ಞೆ ಹೊರಡಿಸಿ, ಏಳರಿಂದ ಉತ್ತೀರ್ಣರಾಗಿ ಎಂಟನೇ ತರಗತಿಗೆ ಪ್ರವೇಶ ಬಯಸುವ ಯಾವುದೇ ವಿದ್ಯಾರ್ಥಿಗೆ ಪ್ರವೇಶ ನಿರಾಕರಿಸಬಾರದೆಂದೂ, ಅಗತ್ಯ ಬಿದ್ದರೆ ಸಂಜೆ ತರಗತಿಗಳನ್ನು ತೆರೆದಾದರೂ ಪ್ರವೇಶ ನೀಡಬೇಕೆಂದು ಆಜ್ಞಾಪಿಸಿದೆ.

ಬಡಜನತೆಗೆ ಶಿಕ್ಷಣ ನಿರಾಕರಿಸುವ ನಮ್ಮ ರಾಜ್ಯದಲ್ಲಿ ಪ್ರತಿಭಟನೆ ನಡೆಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಎಸ್.ಎಫ್.ಐ. ಮತ್ತಿತರ ಸಂಘಸಂಸ್ಥೆಗಳು ಸಿದ್ಧತೆ ನಡೆಸುತ್ತಿವೆ.

○

ಸ್ಟೀಫನ್ನರಿಗೆ ಕಪ್ಪುಬಾವುಟ ಪ್ರದರ್ಶನ

ಕೇಂದ್ರ ಸಂಪರ್ಕ ಖಾತೆ ಸಚಿವ ಸಿ. ಎಂ. ಸ್ಟೀಫನ್ ಅವರು ಇತ್ತೀಚೆಗೆ ಗುಲ್ಬರ್ಗಕ್ಕೆ ಭೇಟಿ ನೀಡಿದ್ದಾಗ ವಿದ್ಯಾರ್ಥಿ-ಯುವಜನ ಹೋರಾಟ ಸಮಿತಿಯವರು ದಿನಾಂಕ 10-5-80 ರಂದು ತಮ್ಮ ಬೇಡಿಕೆಗಳ ಬಗ್ಗೆ ಮನವಿ ಸಲ್ಲಿಸಲು ಅವರ ಬಳಿಗೆ ಹೋದರು. ಆದರೆ ಅದರ ಬಗ್ಗೆ ಕಿಂಚಿತ್ತೂ ಗಮನ ನೀಡದ ಸಚಿವರು ಅವಾಚ್ಯ ಶಬ್ದಗಳಿಂದ ಅವರನ್ನು ನಿಂದಿಸಿ ಕಳುಹಿಸಿದರು. ಸಚಿವರ ಈ ದುರ್ನಡವಳಿಕೆಯಿಂದ ಸಿಟ್ಟಿಗೆದ್ದ ವಿದ್ಯಾರ್ಥಿ ಯುವಜನರು ಮಾರನೇ ದಿನ ಸ್ಟೀಫನ್ ಇಳಿದುಕೊಂಡಿದ್ದ ವಿಶ್ರಾಂತಿ ಗೃಹದ ಮುಂದೆ ಕಪ್ಪುಬಾವುಟ ಮತ್ತು ಭಿತ್ತಿಪತ್ರಗಳ ಪ್ರದರ್ಶನ ನಡೆಸಿದರು. ರಾಜ್ಯದ ಸಚಿವರಾದ ಧರ್ಮಸಿಂಗ್ ಮತ್ತು ಶಾಸಕ ಗೋವಿಂದ ಒಡೆಯರಾಜ್ ಅವರು ಸ್ಟೀಫನ್ನರ ಪರವಾಗಿ ಕ್ಷಮೆಕೇಳಲು ಮುಂದಾದರು. ಆದರೆ ಸ್ಟೀಫನ್ನರೇ ಮನವಿಪತ್ರ ಸ್ವೀಕರಿಸಬೇಕೆಂದು ಪ್ರದರ್ಶನಕಾರರು ಹಠಹಿಡಿದರು. ಸ್ಟೀಫನ್ನರು ಹೊರಗೆಬಂದು ಇವರನ್ನು ಮತ್ತೆ ಬೈದರು. ಈ ಬಗ್ಗೆ ಪ್ರತಿಭಟಿಸಲು ವಿದ್ಯಾರ್ಥಿ ಯುವಜನರು ಮತ್ತೆ ಎರಡು ದಿನಗಳವರೆಗೆ ಗುಲ್ಬರ್ಗದಾದ್ಯಂತ ಪ್ರದರ್ಶನ, ಪ್ರತಿಭಟನಾಸಭೆ ನಡೆಸಿದರು

○

ಯೋಜನೆಯ ತೀವ್ರ ಮಿತಿಗಳು

(3ನೇ ಪುಟದಿಂದ)

ದಿಂದಿನಿಂದಲೂ ಇದನ್ನೇ ನಿರೂಪಿಸುತ್ತ ಬಂದಿದೆ. ದೇಶದಲ್ಲಿನ ಪ್ರತಿಯೊಬ್ಬರ ಮೇಲೂ ಹಿಡಿತ ಸ್ಥಾಪಿಸಬಲ್ಲಷ್ಟು "ಬುದ್ಧಿವಂತ" ಮತ್ತು "ಎಲ್ಲವನ್ನು ಬಲ್ಲ"ವರು ತಾವೇ ಎಂಬಂತೆ, ಕೇಂದ್ರ ಸರ್ಕಾರ ಮತ್ತು ಯೋಜನಾ ಆಯೋಗ ಇಡೀ ದೇಶದ ಮೇಲೆ ಹೆಚ್ಚು ಹೆಚ್ಚು ನಿಯಂತ್ರಣ ಸ್ಥಾಪಿಸುತ್ತ ಬಂದಿದೆ, ಆಳುವ ಪಕ್ಷವು ದುಡಿಯುವ ಜನತೆಯ ಸಂಘಟನೆಗಳು ಮತ್ತು ಎಡ ರಾಜಕೀಯ ಪಕ್ಷಗಳ ಬಗ್ಗೆ ದುಷ್ಟದಿಂದ ವರ್ತಿಸಿದೆ.

ದೇಶದ ಯೋಜನಾ ಅಧಿಕಾರಿಗಳ 30 ವರುಷಗಳ ಶೋಚನೀಯ ಸೋಲಿಗೆ ಯೋಜನಾ ಪ್ರಕ್ರಿಯೆಯ ವರ್ಗ ಸ್ವರೂಪವನ್ನು ಗುರುತಿಸಬೇಕು. ಇದು ಹಿಂದಿನಂತೆಯೇ ಮುಂದುವರೆಯುವಂತೆ ಕಾಣುತ್ತದೆ.

(ಮುಂದುವರೆಯುವುದು)

ಗಡೀಪಾರು ಹೇಳಿಕೆಯ ಖಂಡನೆ

ಕಾಂ. ಎಸ್. ಸೂರ್ಯನಾರಾಯಣರಾವ್ ಮತ್ತು ಮೈಕೋ ಟ್ರೇಡ್ ಯೂನಿಯನ್‌ನ ಕಾರ್ಯಕರ್ತರನ್ನು ಬೆಂಗಳೂರು ಜಿಲ್ಲೆಯಿಂದ ಗಡಿಪಾರು ಮಾಡಬೇಕೆಂಬ ಸರ್ಕಾರದ ಹೇಳಿಕೆಯನ್ನು ರಾಜ್ಯದ ಅನೇಕ ಕಾರ್ಮಿಕ ಸಂಘಗಳು ಖಂಡಿಸಿವೆ.

ಇದು ಪ್ರಜಾಪ್ರಭುತ್ವ ವಿರೋಧಿ ಮತ್ತು ಟ್ರೇಡ್ ಯೂನಿಯನ್ ವಿರೋಧಿ ಕ್ರಮ ಎಂದು ಬೆಂಗಳೂರು ಈಸ್ಟ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಕಾಂ. ಜಾನ್ ವಿನ್ಸೆಂಟ್ ಅವರು ಖಂಡಿಸಿದ್ದಾರೆ. ಈ ಕ್ರಮವನ್ನು ಹಿಂತೆಗೆದುಕೊಳ್ಳಬೇಕೆಂದು ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಸಿ. ಐ. ಟಿ. ಯು. ಬೆಂಗಳೂರು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಹಿರಿಯ ಕಾಮ್ರೇಡ್ ಎನ್. ಎಲ್. ಉಪಾಧ್ಯಾಯ ಅವರು ಸರ್ಕಾರದ ಈ ಕ್ರಮವನ್ನು ಉಗ್ರವಾಗಿ ಖಂಡಿಸಿದ್ದಾರೆ. ಆರೋಪಗಳೆಲ್ಲವೂ ಸುಳ್ಳು, ಇದು ಆಡಳಿತವರ್ಗ, ಸರ್ಕಾರ ಮತ್ತು ಇಂಟಕ್‌ನ ಪಿತೂರಿ ಎಂದು ಅವರು ಹೇಳಿದ್ದಾರೆ. ಈ ಕ್ರಮವನ್ನು ಸಂಘಟಿತ ಕಾರ್ಮಿಕವರ್ಗ ಪ್ರತಿಭಟಿಸಬೇಕೆಂದು ಅವರು ಕರೆಯಿತ್ತಿದ್ದಾರೆ.

ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದ ಸಹಕಾರ್ಯದರ್ಶಿ ಇ. ಕೆ. ಎನ್. ರಾಜನ್ ಅವರು ಹೇಳಿಕೆ ನೀಡಿ ಈ ಗಡಿಪಾರು ಕ್ರಮ ಅತ್ಯಂತ ಖಂಡನಾರ್ಹವಾದುದು ಎಂದು ಹೇಳಿದ್ದಾರೆ. ನಗರದ ಹೋಟೆಲ್ ಕಾರ್ಮಿಕರು ಸರ್ಕಾರದ ಈ ಕಾರ್ಮಿಕವಿರೋಧಿ ನೀತಿಯನ್ನು ಪ್ರತಿಭಟಿಸಲು ಕರೆಕೊಟ್ಟಿದ್ದಾರೆ.

○

ತಂತಿ ಮತ್ತು ದೂರವಾಣಿ ನೌಕರರ ಸಮ್ಮೇಳನ

ಕರ್ನಾಟಕ ರಾಜ್ಯವಲಯದ ತಂತಿ ಮತ್ತು ದೂರವಾಣಿ ನೌಕರರ ಸಂಘದ ಪ್ರಥಮ ಸಮ್ಮೇಳನವು ಮೇ 4ರಂದು ದ.ಕ. ಜಿಲ್ಲೆಯ ಪುತ್ತೂರಿನಲ್ಲಿ ಸಮಾವೇಶಗೊಂಡಿತ್ತು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾಸರಗೋಡಿನ ಲೋಕಸಭಾಸದಸ್ಯರಾದ ಕಾಂ. ರಾಮಣ್ಣ ರೈ ಅವರು ವಹಿಸಿದ್ದರು. ಕರ್ನಾಟಕ ರಾಜ್ಯ ಸಿ.ಐ.ಟಿ.ಯು.ನ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಅಂಚೆತಂತಿ ಇಲಾಖೆಯಲ್ಲಿರುವ ಅಸಂಘಟಿತರನ್ನು ಸಂಘಟಿಸಿ, ನಾಗರಿಕ ಹಕ್ಕುಗಳ ಉಳಿವಿಗೆ ಹೋರಾಟ ನಡೆಸಲು ನಂಜುಂಡಪ್ಪ ಅವರು ಕರೆಯಿತ್ತರು. ಮುಖ್ಯ ಅತಿಥಿಗಳಾಗಿದ್ದ ಕಾಂ. ಕೃಷ್ಣ ೯ಟ್ಟಿಯವರು ನ್ಯಾಯಯುತ ಬೇಡಿಕೆಗಳ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ಅಸಂಘಟಿತ ನೌಕರರ ನ್ಯಾಯಬದ್ಧ ಬೇಡಿಕೆಗಳ ಹೋರಾಟಕ್ಕೆ ಸಂಸತ್ತಿನ ಒಳಗೆ ಮತ್ತು ಹೊರಗೆ ಸಹಕಾರ ನೀಡುವ ಭರವಸೆ ಇತ್ತ ಕಾಂ. ರಾಮಣ್ಣ ರೈ ಅವರು ಪ. ಬಂಗಾಳ, ತ್ರಿಪುರ ಮತ್ತು ಕೇರಳ ರಾಜ್ಯಗಳ ಸರ್ಕಾರಗಳ ಜನಪರ ನೀತಿಗಳನ್ನು ವಿವರಿಸಿದರು. ಅಂಚೆ ತಂತಿ ನೌಕರರನ್ನು ಖಾಯಂಗೊಳಿಸುವುದರಲ್ಲಿ ಸಕ್ರಿಯ ಪಾತ್ರ ವಹಿಸುವ ಆಶ್ವಾಸನೆಯನ್ನು ರಾಮಣ್ಣ ರೈ ನೀಡಿದರು.

ಇಎಸ್‌ಐ ಅವ್ಯವಸ್ಥೆಯ ಬಗ್ಗೆ ಮನವಿ

ಶಿವಮೊಗ್ಗ ನಗರದಲ್ಲಿ ಇ. ಎಸ್. ಐ. ವ್ಯವಸ್ಥೆ ತುಂಬಾ ಹದಗೆಟ್ಟಿದೆ. ಈ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ. ಕೆ. ಚಂದುಕುಟ್ಟಿಯವರ ನೇತೃತ್ವದಲ್ಲಿ ವೈದ್ಯರಿಗೆ ಮನವಿ ಅರ್ಪಿಸಲಾಗಿದೆ. ಕಾರ್ಮಿಕರು ತಮ್ಮ ಸೌಲಭ್ಯಗಳಿಗೆ ಕುಂದುಬಂದಲ್ಲಿ ಹೋರಾಡಲು ಕರೆ ನೀಡಲಾಗಿದೆ.

ಬೀಡಿ ಫೆಡರೇಷನ್ ಸಮಿತಿಯ ಸದಸ್ಯರ ಗಮನಕ್ಕೆ

ಪ್ರಿಯ ಗೆಳೆಯರೇ,

28-5-80ರ ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಸಿ.ಐ.ಟಿ.ಯು. ಆಫೀಸಿನಲ್ಲಿ ಕರ್ನಾಟಕ ರಾಜ್ಯ ಬೀಡಿ ಫೆಡರೇಷನ್ ಸಮಿತಿಯ ಸಭೆಯನ್ನು ಕರೆಯಲಾಗಿದೆ.

ಸಮಿತಿಯ ಸದಸ್ಯರು ಸಕಾಲಕ್ಕೆ ಹಾಜರಾಗಿ, ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಈ ಮೂಲಕ ವಿನಂತಿಸಿಕೊಳ್ಳಲಾಗಿದೆ.

ಕಾರ್ಯದರ್ಶಿ
ದಸ್ತಗೀರ್

'ಹಳ್ಳಿಯ ಬಡವರ ಸಂಘಟಿತ ಹೋರಾಟಕ್ಕೆ'

ಬಿಜಾಪುರ ಜಿಲ್ಲಾ ರೈತ ಸಮ್ಮೇಳನದ ಕರೆ

ಮೇ 11ರಂದು ಬಿಜಾಪುರ ನಗರದಲ್ಲಿ ಅದೊಂದು ಅಪೂರ್ವ ದೃಶ್ಯ. ಬೇರೆಬೇರೆ ತಾಲ್ಲೂಕುಗಳಿಂದ ಬಂದಿದ್ದ ನೂರಾರು ರೈತರು ಮತ್ತು ಕೃಷಿಕೂಲಿಗಾರರು, ಬೇಸಿಗೆಯ ಉರಿ ಬಿಸಿಲನ್ನೂ, ಸುಡುವ ನೆಲದ ಕಾವನ್ನೂ ಲಕ್ಷಿಸದೆ ನಗರದ ಒಂದು ಮೂಲೆಯಿಂದ ಹೊರಟು ಮುಖ್ಯ ಬೀದಿಯನ್ನು ಹಾದು ಘೋಷಣೆಗಳನ್ನು ಕೂಗುತ್ತಾ ಪುರಸಭೆ ಭವನಕ್ಕೆ ಬಂದರು. ಮಧ್ಯಾಹ್ನದ ಮೇಲೆ ಮೂರು ಘಂಟೆಗೆ ಹೊರಟ ಮೆರವಣಿಗೆಯು ಸುಮಾರು ನಾಲ್ಕುವರೆಗೆ ಪುರಸಭೆ ಭವನವನ್ನು ಸೇರಿತ್ತು. ಮೆರವಣಿಗೆಯ ಮುಂಭಾಗದಲ್ಲಿದ್ದ "ಕುರುಬರ ಡೋಲು"ಗಳ ನಾದ ಹಳ್ಳಿಯ ಬಡವರ ಕ್ರೋಧವನ್ನು ಎತ್ತಿತೋರಿಸುತ್ತಿತ್ತು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್, ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್, ಪಕ್ಷದ ಮುಖಂಡ ಕಾಂ. ಎನ್ ಕೆ. ಉಪಾಧ್ಯಾಯ ಮತ್ತು ರೈತ ಮುಂದಾಳು ಕಾಂ. ಬೀಮಸಿ ಕಲಾದಗಿ, ಕಾರ್ಮಿಕ ಮುಖಂಡ ಕಾಂ. ಖಲಾಸಿ ಮೊದಲಾದವರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಪುರಸಭೆ ಭವನದಲ್ಲಿ ಸೇರಿದ ಪ್ರತಿನಿಧಿ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ. ರಾಮಚಂದ್ರರಾವ್ ಅವರು, ಸ್ವಾತಂತ್ರ್ಯ ದೊರೆತ ಮೇಲೆ ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯುತ್ತ ಬಂದುದರ ಪರಿಣಾಮವಾಗಿ ರೈತರು ದಿವಾಳಿಯಾಗುತ್ತಲಿರುವುದನ್ನು ವಿವರಿಸಿ ಹಳ್ಳಿಯ ಬಡವರು ಒಂದಾಗಿ ಬಲಿಷ್ಟ ಸಂಘಟನೆಯನ್ನು ಕಟ್ಟಿ ಚಳುವಳಿಯನ್ನು ನಡೆಸಲು ಕರೆ ಇತ್ತರು. ಸ್ವಾಗತ ಭಾಷಣ ಮಾಡಿದ ಕಾಂ. ಬೀಮಸಿ ಕಲಾದಗಿ ಅವರು ಜಿಲ್ಲೆಯ ರೈತರ ಸಮಸ್ಯೆಗಳನ್ನು ವಿವರಿಸುತ್ತಾ, ಜಿಲ್ಲೆಯಾದ್ಯಂತ ರೈತರ ಪ್ರಬಲ ಸಂಘಟನೆ ಮತ್ತು ಹೋರಾಟಗಳಿಗೆ ಈ ಸಭೆಯು ಪೂರಕವಾಗಲಿದೆ ಎಂದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕಾಂ. ಎನ್. ಕೆ. ಯವರು ಒಂದೂವರೆ ದಶಕದ ಹಿಂದಿನ ರೈತ ಚಳುವಳಿಯನ್ನು ನೆನಪಿಗೆ ತರುತ್ತಾ, ಇಂದು ಪ್ರಬಲ ಚಳುವಳಿ ನಡೆಸಲು ಕರೆ ಇತ್ತರು. ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆದು ಕೊನೆಗೆ ಹದಿಮೂರು ಬೇಡಿಕೆಗಳನ್ನು ಸರ್ವಾನುಮತದಿಂದ ರೂಪಿಸಿ, ಈ ಬಗ್ಗೆ ಸಂಘಟಿತ ಹೋರಾಟ ನಡೆಸಲು ನಿರ್ಣಯಿಸಲಾಯ್ತು. ಜಿಲ್ಲಾ ರೈತಸಂಘಕ್ಕೆ ಅಧ್ಯಕ್ಷರನ್ನಾಗಿ ಕಾಂ. ಬೀಮಸಿ ಕಲಾದಗಿ ಅವರನ್ನು ಸರ್ವಾನುಮತದಿಂದ ಆರಿಸಲಾಯ್ತು.



"ಜಿಲ್ಲಾ ರೈತ ಸಮ್ಮೇಳನದ ಅಂಗವಾಗಿ ಬಿಜಾಪುರದಲ್ಲಿ ನಡೆದ ಮೆರವಣಿಗೆಯ ಒಂದು ದೃಶ್ಯ"

ಸಮ್ಮೇಳನದ ನಿರ್ಣಯಗಳು :

1. ಬಡ ಮತ್ತು ಮಧ್ಯಮ ರೈತನು ಬೆಳೆಯುವ ಬೆಳೆಗಳಿಗೆ ಯೋಗ್ಯ ಬೆಲೆ ಸಿಗಬೇಕು.

2. ರೈತನ ಒಕ್ಕಲತನಕ್ಕೆ ಅತ್ಯಾವಶ್ಯಕವಾಗಿ ಬೇಕಾದ ಕಬ್ಬಿಣ, ಅರಿವೆ, ಡಿಜೈಲ್, ಬೀಜ, ಗೊಬ್ಬರಗಳು ನ್ಯಾಯ ಬೆಲೆಯಲ್ಲಿ ವೇಳೆಗೆ ಸರಿಯಾಗಿ ಸಿಗಬೇಕು.

3. ಬ್ಯಾಂಕುಗಳಿಂದ ಬಡ ಮತ್ತು ಮಧ್ಯಮ ವರ್ಗದ ರೈತರಿಗೆ ಕಡಿಮೆ ಬಡ್ಡಿಯಲ್ಲಿ ಅನುಕೂಲಕರವಾದ ಕಂತುಗಳಲ್ಲಿ ಸಾಲದ ಸೌಲಭ್ಯ ಸಿಗಬೇಕು.

4. ರೈತನು ಬೆಳೆಯುವ ಬೆಳೆಗೂ ಅವನು ಸಾಕುವ ದನಗಳಿಗೂ ವಿಮೆಯ ಅನುಕೂಲತೆ ಒದಗಿಸಬೇಕು.

5. ಭೂಹಿಡುವಳಿಯ ಗರಿಷ್ಠ ಮಿತಿಗಿಂತ ಹೆಚ್ಚಾಗಿರುವ ಭೂಮಾಲಕರ ಭೂಮಿಯನ್ನು ಭೂಹೀನ ಬಡ ಕುಟುಂಬಗಳಿಗೆ ಹಂಚಬೇಕು.

6. ಜಿಲ್ಲೆಯಲ್ಲಿ ಸಾಕಷ್ಟು ಪಡ ಭೂಮಿ ಇರುತ್ತದೆ. ಅದನ್ನು ಬಡ ಹರಿಜನ-ಗಿರಿಜನರಿಗೆ ಪುಕ್ಕಟೆಯಾಗಿ ಹಂಚಬೇಕು.

7. ಭೂನ್ಯಾಯಮಂಡಳಿಗಳಲ್ಲಿ ರೈತಸಂಘಕ್ಕೆ ಪ್ರಾತಿನಿಧ್ಯ ಸಿಗಬೇಕು.

8. ಗ್ರಾಮ ಲೆಕ್ಕಾಧಿಕಾರಿ ಹಾಗೂ ಇತರ ಕಛೇರಿಗಳಲ್ಲಿ ಲಂಚಗುಳಿತನ ಭ್ರಷ್ಟಾಚಾರದಿಂದಾಗಿ ಬಡ ರೈತರಿಗೆ ನ್ಯಾಯ ಸಿಗುತ್ತಿಲ್ಲ. ಲಂಚಗುಳಿತನ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಬೇಕು.

9. ಕೃಷಿಕೂಲಿಗಾರರಿಗೆ ಕನಿಷ್ಠ ವೇತನ ಸಿಗಬೇಕು. ಬಡರೈತರಿಗೆ ಮತ್ತು ಕೃಷಿಕೂಲಿಗಾರರಿಗೆ ಸಾಗುವಳಿ ಕೆಲಸವಿಲ್ಲದ ಸಮಯದಲ್ಲಿ ಬದ್ಲಿ ಉದ್ಯೋಗದ ವ್ಯವಸ್ಥೆ ಮಾಡಬೇಕು.

10. ರೈತರ ಮೇಲಿರುವ ಸಾವುಕಾರರ ಸಾಲವನ್ನೆಲ್ಲ ರದ್ದು ಪಡಿಸಬೇಕು.

11. ಜಮೀನ್ದಾರಿ ರದ್ದಾಗಿ ದುಡಿಯುವ ರೈತನಿಗೆ ಭೂಮಿಯ ಒಡೆತನ ಸಿಗಬೇಕು.

12. ಒಕ್ಕಲತನ ಹುಟ್ಟುವಳಿ ಮಾರುಕಟ್ಟೆ ಅಧಿಕಾರಿಗಳಿಂದ ನಡೆಯುವ ರೈತನ ಸುಲಿಗೆ ಕೂಡಲೇ ಬಂದಾಗಿ ಸುಲಿಗೆರಹಿತ ವ್ಯಾಪಾರದ ವ್ಯವಸ್ಥೆಯಾಗಬೇಕು.

13. ಸೊಸೈಟಿಗಳಿಂದ ರೈತರಿಗೆ ಕಡಿಮೆ ಬಡ್ಡಿಯಿಂದ ಸುಲಭ ಕಂತಿನಲ್ಲಿ ಸಾಲ ಸಿಗುವಂತಾಗಬೇಕು. ●

ಕುಶಲ ಕಾರ್ಮಿಕರ ದಿಟ್ಟ ಹೋರಾಟ

ಮರದ ಹಲಗೆಯಲ್ಲಿ ಚಿತ್ರಗಳನ್ನು ಬಿಡಿಸುವ, ಬೊಂಬೆಗಳನ್ನು ತಯಾರಿಸುವ ಸುಮಾರು 3000ಕ್ಕೂ ಹೆಚ್ಚು ಕುಶಲ ಕರ್ಮಿಗಳು ಇಂದು ಕಾನೂನಿನ ಪ್ರಕಾರ ಸಿಗಬೇಕಾದ ಯಾವ ಸೌಲಭ್ಯವೂ ಇಲ್ಲದೆ ನರಳುತ್ತಿದ್ದಾರೆ. ದಿನಕ್ಕೆ ಎಂಟು ಗಂಟೆ ಕೆಲಸ, ವಾರದ ರಜೆ, ಕೆಲಸದ ಭದ್ರತೆ, ಹಾಜರಾತಿ, ಕೆಲಸದಿಂದ ವಜಾ ಆದವರಿಗೆ ಪರಿಹಾರ ಯಾವುದನ್ನೂ ಕೇಳುವಂತಿಲ್ಲ.

ಸರಕಾರದ ಕಾರ್ಮಿಕ ಇಲಾಖೆ, ಮಾಲೀಕರ ಪರವಾಗಿಯೇ ಇರುವುದರಿಂದ ಅವರಿಗೆ ಈ ಬಗ್ಗೆ ಲಕ್ಷ್ಯವಿಲ್ಲ. ಮಂತ್ರಿಗಳಿಗೆ ಕೊಟ್ಟ ಮನವಿಗಳಿಗೆ ಬೆಲೆಯಿಲ್ಲ.

ಈಗ ಕಾರ್ಮಿಕರು ಸಿ.ಐ.ಟಿ.ಯು. ಅಡಿಯಲ್ಲಿ ಸಂಘಟನೆಯಾಗಿ ಹೋರಾಟದ ಹಾದಿ ಹಿಡಿದಿದ್ದಾರೆ. ಹೋರಾಟದ ಫಲವಾಗಿ ಮೊದಲನೆಯದಾಗಿ ಶ್ರೀಲಕ್ಷ್ಮೀ ಫೈನ್ ಆರ್ಟ್ಸ್‌ನ ಐವತ್ತು ಜನ ಕಾರ್ಮಿಕರು ಕೆಲಸದ ಭದ್ರತೆ, ನಿಯಮಿತ ಸಂಬಳ, ನಿಯಮಿತ ಕೆಲಸದ ಒಪ್ಪಂದಕ್ಕೆ ಬಂದಿದ್ದಾರೆ. ಇನ್ನುಳಿದ ಸೌಲಭ್ಯಗಳಾದ ಗ್ರಾಚುಯಿಟಿ, ಪ್ರಾವಿಡೆಂಟ್ ಫಂಡ್, ಬೋನಸ್ ಇತ್ಯಾದಿ ಸೌಲಭ್ಯಗಳಿಗಾಗಿ ಹೋರಾಟ ನಡೆಸಲು, ಸಂಘಟನೆಯನ್ನು ಬಲಪಡಿಸಲು ಕಾರ್ಮಿಕರು ತೊಡಗಿದ್ದಾರೆ.

○

ಅದ್ದೂರಿ ಮೇ ದಿನಾಚರಣೆ

ದಿ. 14-5-80ರಂದು ತುಮಕೂರು ಜಿಲ್ಲಾ ಬೀಡಿಕಾರ್ಮಿಕರ ಸಂಘ (ಸಿ. ಐ. ಟಿ. ಯು.) ಆಶ್ರಯದಲ್ಲಿ ಮೇ ದಿನಾಚರಣೆಯನ್ನು ಅದ್ದೂರಿಯಿಂದ ಆಚರಿಸಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯದ ಬೀಡಿಕಾರ್ಮಿಕರ ಫೆಡರೇಷನ್ನಿನ ಉಪಾಧ್ಯಕ್ಷರಾದ ಕಾಮ್ರೇಡ್ ಕೆ. ಆರ್. ನಾಯಕ್‌ರವರು ವಹಿಸಿದ್ದರು. ಕಾರ್ಮಿಕರ ಇಂದಿನ ದುಸ್ಥಿತಿಯ ಬಗ್ಗೆ ಮಾತನಾಡಿ ಚರಿತ್ರೆಯಿಂದ ಪಾಠ ಕಲಿಯಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದರು. ಸರ್ವಾಧಿಕಾರಿ ಶಕ್ತಿಗಳು ಜಾರಿಗೆ ತರಲು ಯತ್ನಿಸುತ್ತಿರುವ ಕಾರ್ಮಿಕ ವಿರೋಧಿ ವಿಧೇಯಕಗಳ ಬಗ್ಗೆ ಎಚ್ಚರಿಸಿ ಕಾರ್ಮಿಕವರ್ಗದ ಹಕ್ಕುಗಳ ರಕ್ಷಣೆಗಾಗಿ ಐಕ್ಯಹೋರಾಟಕ್ಕೆ ಕರೆ ನೀಡಿದರು. ಇದೇ ಸಂದರ್ಭದಲ್ಲಿ ಬೇರೆ ಕಾರ್ಮಿಕ ಸಂಘಟನೆಗಳಲ್ಲಿ ತೊಡಗಿರುವ ಮುಖಂಡರುಗಳಾದ ಕಾಂ. ಟಿ.ಕೆ. ಗೋವಿಂದರಾಜು, ಕಾಂ. ಟಿ. ಆರ್. ಸುಂದರೇಶ್, ಕಾಂ ಶ್ರೀರಾಮರೆಡ್ಡಿ, ಕಾಂ. ಟಿ. ಜಿ. ಅಡವೀಶಯ್ಯ, ಕಾಂ. ಖಾಜಾ ಮೊಹಿದ್ದೀನ್, ಕಾಂ. ಪಿ. ಸಿ. ಶಿವನಂಜಪ್ಪ ಹಾಗೂ ಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನಾಸಮಿತಿಯ ಸಂಚಾಲಕ ಕಾಂ. ಯತಿರಾಜು ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು. ಸಮಾರಂಭದಲ್ಲಿ ಕಾಂ. ಗೋವಿಂದರಾಜು ಹಾಗೂ ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಕಾರ್ಯದರ್ಶಿಗಳಾದ ಕಾಂ. ಮಹಮದ್‌ದಸ್ತಗೀರ್‌ರವರು ಮಂಡಿಸಿದ ಈ ಕೆಳಕಂಡ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

1. ಜಿಲ್ಲಾ ಮಟ್ಟದಲ್ಲಿ ಒಂದು ಕಾರ್ಮಿಕ ಸೌಹಾರ್ದತಾ ಸಮಿತಿಯನ್ನು ರಚಿಸಿ ಅವರ ಯೋಗಕ್ಷೇಮಕ್ಕಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು.

2. ಮೇ ದಿನವನ್ನು ರಾಷ್ಟ್ರೀಯ ರಜಾದಿನವೆಂದು ಘೋಷಿಸಲು ಒತ್ತಾಯಿಸುವುದು.

3. ಕರ್ನಾಟಕ ಸರಕಾರ ಜಾರಿಗೆ ತರಲು ಯೋಚಿಸಿರುವ ಅಗತ್ಯಸೇವಾ ಸಂಸ್ಥೆಗಳ ನಿರ್ವಹಣೆ ವಿಧೇಯಕವನ್ನು ವಿರೋಧಿಸುವುದು.

ಸಮಾರಂಭದ ಕೊನೆಯಲ್ಲಿ ಕಾ. ದಸ್ತಗೀರ್ ವಂದಿಸಿದರು. ನಂತರ ಕನ್ನಡ ಹಿಂದಿ ಹಾಗೂ ಉರ್ದು ಭಾಷೆಗಳ ಕವಿ ಸಮ್ಮೇಳನ ನಡೆಯಿತು. ಇದರಲ್ಲಿ ಅನೇಕ ಬೀಡಿ ಕಾರ್ಮಿಕರು ಹಾಗೂ ಎಡಪಂಥೀಯ ಲೇಖಕರು ಭಾಗವಹಿಸಿದ್ದರು.

ಈ ಸಭೆಯ ಕಾರ್ಯಕಲಾಪಗಳ ವ್ಯವಸ್ಥೆಯನ್ನು ವಿದ್ಯಾರ್ಥಿ ಫೆಡರೇಷನ್ನಿನ ಕಾರ್ಯದರ್ಶಿಗಳಾದ ಕಾಂ. ರವೀಂದ್ರ ನಾಯಕ್ ಹಾಗೂ ಶರಣಪ್ಪನವರು ವ್ಯವಸ್ಥಿತಗೊಳಿಸಿದ್ದರು.

○

ಪುರಸಭೆ ಅಧಿಕಾರಿಗಳ ಭರವಸೆ ಈಡೇರಿಲ್ಲ

ಬಂಟ್ವಾಳ ಪುರಸಭೆಗೆ ಒಳಪಟ್ಟ ಅನೇಕ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಬಹಳ ದಿನಗಳಿಂದ ತೊಂದರೆಯಾಗಿದೆ. ಮಾರ್ಚ್ ತಿಂಗಳ 27ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನಾಯಕತ್ವದಲ್ಲಿ ನಾಗರೀಕರು ಪ್ರತಿಭಟನೆ ವ್ಯಕ್ತಪಡಿಸಿ ಪುರಸಭೆಯ ಚೀಫ್ ಆಫೀಸರ್ ಮತ್ತು ಅಧ್ಯಕ್ಷರನ್ನು ಘೇರಾವೊ ಮಾಡಿದ್ದರು. ಈ ಪ್ರದೇಶಗಳಿಗೆ ಬಾವಿ ತೋಡಿಸಲು ಹಣ ಸಹಾಯ ಮಾಡುವುದಾಗಿ ಭರವಸೆ ಕೊಟ್ಟಿದ್ದರು. ಬಾವಿಯನ್ನು ತೋಡಿ ನೀರು ಸಿಕ್ಕಿದೆ. ಆದರೆ ಈಗ ಹಣಸಹಾಯ ನೀಡಲು ಪುರಸಭೆ ಅಧಿಕಾರಿಗಳು ಹಿಂಜರಿದಿದ್ದಾರೆ. ಆದ್ದರಿಂದ ಈ ಬಗ್ಗೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಸಲ್ಲಿಸಲಾಗಿದೆ.

●

ಬೆಳಗಾವಿಯಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ

(ಒಂದನೇ ಪುಟದಿಂದ)

ಹೋರಾಟಗಳ ಹಿನ್ನೆಲೆ-ಸಮಸ್ಯೆಗಳು :

ಇಂಡಾಲ್ ಕಾರ್ಮಿಕರ ಹೋರಾಟ :

ಕೆನಡಾ ದೇಶದ ಬಹುರಾಷ್ಟ್ರೀಯ ಕಂಪೆನಿಯ ಮಾಲಕತ್ವದ ಇಂಡಾಲ್ ಕಂಪೆನಿಯಲ್ಲಿ ಸುಮಾರು ಒಂದು ಸಾವಿರಕ್ಕೂ ಮೇಲೆ ಖಾಯಂ ಕೆಲಸಗಾರರೂ, ಸುಮಾರು 500ಕ್ಕೂ ಮೇಲ್ಪಟ್ಟು ಕಂಟ್ರಾಕ್ಟ್ ಕಾರ್ಮಿಕರೂ ದುಡಿಯುತ್ತಲಿರುವರು. ಅಪಾರ ಲಾಭ ಗಳಿಸುವ ಈ ಕಂಪೆನಿಯ ಮಾಲಕತ್ವಕ್ಕೆ ಇಂಡಾಲ್ ಕಾರಖಾನೆಯಲ್ಲಿ ಬಹುಸಂಖ್ಯಾತ ಕಾರ್ಮಿಕರು ಕಾಂ. ಆರ್. ಜಿ. ಸ್ಥಳೇಕರ ಅವರನ್ನು ಯೂನಿಯನ್ನಿಗೆ ಅಧ್ಯಕ್ಷರನ್ನಾಗಿ ಮಾಡಿ ಸಿ. ಐ. ಟಿ. ಯು. ವಿಗೆ ಸೇರಿದ್ದು ನುಂಗಲಾರದ ತುತ್ತಾಯಿತು. ವಿದ್ಯುಚ್ಛಕ್ತಿ ಕಡಿತದಿಂದಾಗಿ ಉತ್ಪಾದನಾ ಬೋನಸ್ಸಿನಲ್ಲಿ ಕಡಿತ ಉಂಟಾದುದಕ್ಕೆ ತಾತ್ಕಾಲಿಕ ಪರಿಹಾರವಾಗಿ, ಇಂಡಾಲ್‌ನ ಮೂರು ಯೂನಿಯನ್ನುಗಳೂ ರೂ. 150 ರಂತೆ ತಾತ್ಕಾಲಿಕ ಪರಿಹಾರ ಕೇಳಿದುವು. ವಿದ್ಯುಚ್ಛಕ್ತಿ ಕಡಿತದ ನೆಪದಲ್ಲಿ 303 ಮಂದಿ ಕಾರ್ಮಿಕರನ್ನು ಲೇ ಆಫ್ ಮಾಡಲು ಮಾಲಕರು ಯೋಚಿಸಿದರು. ಹಲವಾರು ಕಂಟ್ರಾಕ್ಟ್ ಕೆಲಸಗಾರರನ್ನು ಲೇ ಆಫ್ ಮಾಡಲಾಯಿತು. ಆಮೇಲೆ ಒತ್ತಾಯ ಮತ್ತು ಮಾತುಕತೆಗಳ ಮೂಲಕ ಶೇ. 50 ಲೇ ಆಫ್ ವೇತನ ಮತ್ತು ತುಟ್ಟಿಭತ್ಯವನ್ನು ಕೊಡಲು ಮತ್ತು ಬೋನಸ್ಸು ಇತ್ಯಾದಿಗಳನ್ನು ಕೊಡಲು ಒಪ್ಪಿದರೂ ಲಿಖಿತ ಮೂಲಕ ಒಪ್ಪಂದಕ್ಕೆ ಒಪ್ಪಲಿಲ್ಲ.

ಲೇ ಆಫ್ ಮಾಡಿ ವೇತನ ಕೊಡುವುದಕ್ಕೆ ಬದಲು ಏನಾದರೂ ನೆಪ ಹೂಡಿ ಲಾಕ್ ಔಟ್ (ಬೀಗಮುದ್ರೆ) ಮಾಡುವುದು ಮೇನೇಜ್‌ಮೆಂಟಿಗೆ ಬೇಕಾಗಿತ್ತು. ಆಹಾರ ವಿಷ ಸೇವನೆಯಿಂದ 1-3-80ರಂದು 22 ಕಾರ್ಮಿಕರು ಆಸ್ಪತ್ರೆಗೆ ದಾಖಲಾದರೂ, ಮೇನೇಜ್‌ಮೆಂಟು ಕ್ಯಾಂಟೀನ್ ವ್ಯವಸ್ಥೆ ಸುಧಾರಿಸಲು ಕ್ರಮವಹಿಸಲಿಲ್ಲ. 4-4-80ರಂದು "ಚಾ"ದಲ್ಲಿ ಕಾಸ್ಟಿಕ್ ಸೋಡಾ ಇದ್ದುದು ಕಂಡುಬಂತು. ಇದನ್ನು ವರದಿಮಾಡಿದ ಕ್ಯಾಂಟೀನ್ ಕೆಲಸದ ಹುಡುಗನನ್ನು ಕೆಲಸದಿಂದ ಅಮಾನತು ಮಾಡಲಾಯಿತು. 11-4-80 ರಂದು ಒಬ್ಬ ಅಧಿಕಾರಿಯು ಕೆಲಸಗಾರರನ್ನು ತುಚ್ಛೀಕರಿಸಿ ಮಾತನಾಡಿದ್ದನ್ನು ಕಾರ್ಮಿಕರು ಪ್ರತಿಭಟಿಸಿದರು. ಸ್ಥಳಕ್ಕೆ ಬಂದಿದ್ದ ಡಿ. ವೈ. ಎಸ್. ಪಿ ಯವರು ಭರವಸೆ ಕೊಟ್ಟರೂ ಮುಂದೆ ತಪ್ಪಿತಸ್ಥ ಅಧಿಕಾರಿಯ ಬಗ್ಗೆ ಏನೂ ಕ್ರಮವಹಿಸಲಿಲ್ಲ. ಕೆಲಸದ ಭಾರ ಹೆಚ್ಚಿಸಿದ್ದನ್ನು ಪ್ರತಿಭಟಿಸಿದ್ದಕ್ಕೆ ಕಾಸ್ಟಿಂಗ್ ಪ್ಲಾಂಟಿನಲ್ಲಿ ಮೂವರ ಮೇಲೆ ಚಾರ್ಜ್‌ಶೀಟ್ ಕೊಡಲಾಯಿತು. ಆ ಮೇಲೆ 5 ಕೆಲಸಗಾರರನ್ನು ಅಮಾನತುಗೊಳಿಸಲಾಯಿತು. ಅಲ್ಯುಮಿನಾ ಪ್ಲಾಂಟಿನಲ್ಲೂ ಇಬ್ಬರಿಗೆ ಚಾರ್ಜ್‌ಶೀಟ್ ಕೊಡಲಾಯಿತು. ಅಂದೇ ಯೂನಿಯನ್ನಿನ ಇಬ್ಬರು ಉಪಾಧ್ಯಕ್ಷರುಗಳು, ಕಾಂ. ನಾಗಯ್ಯ ಮತ್ತು ಕಾಂ. ಜುನ್ನದಿ ಅವರನ್ನು ಅಮಾನತುಗೊಳಿಸಲಾಯಿತು. 15-4-80ರಂದು ಯೂನಿಯನ್ನಿನ ಜತೆಕಾರ್ಯದರ್ಶಿ ಕಾಂ. ಉನ್ನಿತ್ತನ್ ಮತ್ತು ಹಲವರನ್ನು ಅಮಾನತುಗೊಳಿಸಲಾಯಿತು. 16-4-80ರಂದು ಪ್ರತಿಭಟನೆ ಮಾಡಿದ ಕಾರಣಕ್ಕಾಗಿ ಇನ್ನೂ ಹಲವರನ್ನು ಸಸ್ಪೆಂಡ್ ಮಾಡಲಾಯಿತು.

ಏಪ್ರಿಲ್ 21, 22, 23ರಂದು ಯೂನಿಯನ್ ಮತ್ತು ಮೇನೇಜ್‌ಮೆಂಟಿನ ಮಧ್ಯೆ ಮಾತುಕತೆ ನಡೆದರೂ, ಮೇನೇಜುಮೆಂಟಿನ ಹಠಮಾರಿ ನಿಲುವೆಯಿಂದ ಏನೂ ತೀರ್ಮಾನಕ್ಕೆ ಬರಲಾಗಲಿಲ್ಲ. 29ರಂದು ಬೆಳಗಾವಿಯ ಡೆಪ್ಯುಟಿ ಲೇಬರ್ ಕಮೀಷನರ್‌ರವರ ಸಮ್ಮುಖದಲ್ಲಿ ಸಂಜೆ 6 ಗಂಟೆ ತನಕ ಮಾತುಕತೆ ನಡೆಯಿತು; 30ಕ್ಕೆ ಮಾತುಕತೆ ಮುಂದೂಡಲಾಯಿತು. ಆದರೆ ಅಂದೇ ಅಂದರೆ 29ರ ರಾತ್ರೆ 10 ಘಂಟೆಗೆ ಮೇನೇಜುಮೆಂಟ್ ಬೀಗಮುದ್ರೆಯನ್ನು ಸಾರಿತು. 7-5-80 ರಂದು ಮತ್ತೆ ಮಾತುಕತೆ ನಡೆದಾಗ ಬೀಗಮುದ್ರೆ ಕಾಲದ ವೇತನದೊಡನೆ ಬೀಗಮುದ್ರೆಯನ್ನು ಎತ್ತಬೇಕೆಂದು ಯೂನಿಯನ್ ಹೇಳಿತು. ಆದರೆ ಮೇನೇಜುಮೆಂಟಿನವರು ಕಾರ್ಮಿಕರು ವೈಯಕ್ತಿಕವಾಗಿ ತಪ್ಪೊಪ್ಪಿ, ಬರೆದು ಕೊಟ್ಟಲ್ಲಿ ಮಾತ್ರ ಲಾಕ್ ಔಟ್ ಎತ್ತುವೆ ಎಂದಿತು. ಕಾರ್ಮಿಕರ ಪರವಾಗಿ ಯೂನಿಯನ್ನು ಬರೆದು ಕೊಡುವುದಾಗಿ ಹೇಳಿದರೆ ಮೇನೇಜುಮೆಂಟು ಒಪ್ಪಲಿಲ್ಲ. 8-5-80ರಂದೂ ಮಾತುಕತೆ ನಡೆದು, ಏನೂ ತೀರ್ಮಾನವಾಗದೆ ಅಂದು ಆಡಳಿತ ಕಛೇರಿಯೆದುರು ಕಾರ್ಮಿಕರು ಮತ್ತು ಅವರ ಮನೆ ಮಂದಿ ಸೇರಿ ಸಂಜೆ 4-30ಕ್ಕೆ ಪ್ರತಿಭಟನೆ ನಡೆಸಿದರು. ಆಗ ಪೋಲೀಸರು ಬಂದು ವಿನಾಕಾರಣ ಲಾಠಿ ಚಾರ್ಜು ನಡೆಸಿದರು. ಹಲವಾರು ಮಂದಿಗೆ ಗಾಯಗಳಾದವು. ವಾಚ್‌ಮೆನ್ ಮೋತಿರಾಮ್ ಅವರ ಪುತ್ರಿ ಕುಮಾರಿ ಶೋಭಾ, ಮತ್ತು ಇನ್ಸ್‌ಪೆಕ್ಟರ್ ಯುವತಿ ಕುಮಾರಿ ಅನಿತಾ ಪಾಟೀಲ್ ಇವರುಗಳಿಗೆ ತುಂಬಾ ಗಾಯವಾಯಿತು. 300 ಮಂದಿ ಕಾರ್ಮಿಕರನ್ನು ಬಂಧಿಸಲಾಯ್ತು. ಇವರ ಬಿಡುಗಡೆಯನ್ನು ಒತ್ತಾಯಿಸಿ ಭಾರಿ ಸಂಖ್ಯೆಯಲ್ಲಿ ಕಾರ್ಮಿಕರು ಮೆರವಣಿಗೆ ಮೂಲಕ ಸ್ಟೇಶನಿಗೆ ಹೋಗಿ ಒತ್ತಾಯಿಸಿದಾಗ ಇವರ ಬಿಡುಗಡೆ ಆಯಿತು.

11-5-80ರಿಂದ ನಗರದಲ್ಲಿ ಸೆಕ್ಷನ್ 35 ಜಾರಿಯಲ್ಲಿದ್ದು, ಇಂಡಾಲ್ ಕಾಲೋನಿಯು ಈಗ ಪೋಲೀಸರ ಬೀಡಾಗಿದೆ. 17-5-80ರಂದು ಬೆಂಗಳೂರಲ್ಲಿ ಲೇಬರ್ ಕಮೀಷನರ್‌ರವರ ಸಮ್ಮುಖದಲ್ಲಿ ಮಾತುಕತೆ ನಡೆದು ಏನೂ ತೀರ್ಮಾನವಾಗಿಲ್ಲ. ಮಾತುಕತೆ ಇನ್ನೂ ಮುಂದುವರೆದಿದೆ. ಕಾನೂನುಬಾಹಿರ ಲಾಕ್‌ಔಟನ್ನು ಎತ್ತುವ ತನಕ ಹೋರಾಡುವ ದೃಢ ನಿರ್ಧಾರದಲ್ಲಿ ಕಾರ್ಮಿಕರು ಮುನ್ನಡೆಯುತ್ತಲಿದ್ದಾರೆ.

ಪವರ್‌ಲೂಮ್ ಕಾರ್ಮಿಕರ ಹೋರಾಟ :

ಕರ್ನಾಟಕ ರಾಜ್ಯದಲ್ಲಿ ಸಹಸ್ರಾರು ಮಂದಿ ಪವರ್ ಲೂಮ್ ಕಾರ್ಮಿಕರಿದ್ದು, ಇವರಲ್ಲಿ ಸುಮಾರು ಇಪ್ಪತ್ತು ಸಹಸ್ರ ಮಂದಿ ಬೆಳಗಾವಿ ನಗರ ಮತ್ತು ನಗರದ ಸುತ್ತುಮುತ್ತ ಇರುವರು.

ಬೆಳಗಾವಿ ಜಿಲ್ಲೆಯಲ್ಲಿ ಸುಮಾರು 500 ಮಂದಿಯ ಒಡೆತನದಲ್ಲಿ ಸುಮಾರು 7000 ಪವರ್‌ಲೂಮು ಗಳಿವೆ. ಇದರಲ್ಲಿ 40ರಿಂದ 50 ಲೂಮುಗಳ ಒಡೆಯರು ನೂರು ಮಂದಿಯಷ್ಟಿದ್ದಾರೆ. ಉಳಿದ ಹೆಚ್ಚಿನವು ಸಣ್ಣ ಮಾಲಕರ ಹತ್ತಿರವಿದೆ. ಸುಮಾರು 50ರಿಂದ 60ರಷ್ಟು ತಾವೇ ದುಡಿಯುವ ಮಾಲಕರಿರುವರು.

ಮಗ್ಗದಲ್ಲಿ ದುಡಿಯುವ ಸಹಸ್ರಾರು ಕಾರ್ಮಿಕರು ಹೆಚ್ಚಿನ ಶೋಷಣೆಗೊಳಗಾಗಿದ್ದಾರೆ. ಮೊದಲು ಪೀಸ್ ರೇಟ್ ಪದ್ಧತಿ ವೇತನವಿತ್ತು. ಇದರ ಪ್ರಕಾರ ಸಾಮಾನ್ಯ ಹತ್ತಿ ಬಟ್ಟೆಯನ್ನು ದಿನ ಒಂದರ 12 ತಾಸು ದುಡಿದು 18 ಮೀಟರು ಬಟ್ಟೆ ಮಾಡಿದರೆ ಸುಮಾರು 7ರಿಂದ 8ರೂ. ಸಿಗುತ್ತಿತ್ತು. ಸಿಲ್ಕ್ ಬಟ್ಟೆ ಡಬ್ಬಲ್ ಬಾಕ್ಸ್ ನೆಯ್ದರೆ ರೂ. 9 ರಷ್ಟು ಸಿಗುತ್ತಿತ್ತು. ಆದರೆ ಈ ಹಿಂದಿನ ರಾಜ್ಯ ಸರಕಾರವು ಒಂದು ಕಾನೂನನ್ನು ಮಾಡಿ ತಾತ್ವಿಕವಾಗಿ ಪೀಸ್‌ರೇಟ್ ಪದ್ಧತಿಯನ್ನು ಬದಲುಮಾಡಿ ಸಮಯದ ಆಧಾರದಲ್ಲಿ ಕೂಲಿ ನಿರ್ಣಯಿಸಿತು. ಬೆಳಗಾವಿಯಲ್ಲಿ ಪೀಸ್‌ರೇಟಿಗೆ ಬದಲಾಗಿ ಸಮಯದ ಆಧಾರದ ಕೂಲಿ ಜಾರಿಯಾಗಬೇಕೆಂದಾಯಿತು ಆದರೆ ಹಲವೆಡೆ ಪೀಸ್‌ರೇಟ್ ಪದ್ಧತಿಯೂ ಉಳಿಯಲು ಅವಕಾಶವೀಯಲಾಯಿತು. ಹದಿಮೂರು ವರ್ಷಗಳ ನಂತರ ವೇತನ ಪರಿಷ್ಕರಣ ಮಾಡಲಾಯಿತು. ಈ ಪರಿಷ್ಕರಣ ವೇತನದ ಪ್ರಕಾರ ಮೊದಲು ಒಬ್ಬ ಕಾರ್ಮಿಕನಿಗೆ 8 ಗಂಟೆ ಕೆಲಸ ಮಾಡಿದರೆ ಪೀಸ್‌ರೇಟಿನ ಪ್ರಕಾರ ಸುಮಾರು ರೂ. 4-50 ಬಂದರೆ ಈ ಸಿಂಗಲ್ ಬಾಕ್ಸ್ ಕೆಲಸದಿಂದ ದಿನಕ್ಕೆ ರೂ. 12-80 ಮತ್ತು ಡಬ್ಬಲ್ ಬಾಕ್ಸ್ ಕೆಲಸದಿಂದ ದಿನಕ್ಕೆ ರೂ. 13-70, ತಯ್ಯಾರಿ ಕೆಲಸದ ಸ್ತ್ರೀಯರಿಗೆ ರೂ. 8 ಬರಬೇಕು.

ಆದರೆ ಮಾಲಕರುಗಳು ಇವಾವುವನ್ನೂ ಒಪ್ಪದ್ದರ ಪರಿಣಾಮವಾಗಿ, ಅತೀ ಕಡಿಮೆ ಕೂಲಿಗೆ ದುಡಿಯುತ್ತಲಿದ್ದ ಸಹಸ್ರಾರು ಕಾರ್ಮಿಕರು "ಶ್ರಮಿಕ ಶಕ್ತಿ ಸಂಘಟನೆ"ಯ ನೇತೃತ್ವದಲ್ಲಿ ಹೋರಾಟ ಪ್ರಾರಂಭಿಸಿದರು. ಅಧಿಕ ಸಂಖ್ಯೆಯಲ್ಲಿ ಸ್ತ್ರೀಯರೂ ಸೇರಿದಂತೆ ಸಹಸ್ರಾರು ಕಾರ್ಮಿಕರು ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಒಪ್ಪಿಸಿದರು. ಕಾರ್ಮಿಕ ಸಚಿವ ಇಬ್ರಾಹಿಮ್ ಅವರು ಬೆಳಗಾವಿಗೆ ಬಂದು ಭರವಸೆ ಇತ್ತಿದ್ದರೂ, ಕಾನೂನು ಪ್ರಕಾರ ವೇತನ ದೊರೆಯುವಂತಾಗಲಿಲ್ಲ. ಮಾಲಕರುಗಳು ಬೀಗಮುದ್ರೆ ಸಾರುವ ಕ್ರಮವಹಿಸುತ್ತಲಿದ್ದು ಈ ಸಹಸ್ರಾರು ಮಂದಿ ಬೀದಿಪಾಲಾಗುವ ಅಂಚಿನಲ್ಲಿರುವರು. 11-5-80 ರಂದು ಪವರ್‌ಲೂಮ್ ಕಾರ್ಮಿಕರ ಸಮಾವೇಶವು ನಡೆದು, ಹೋರಾಟವನ್ನು ಬಲಪಡಿಸಲು ತೀರ್ಮಾನಿಸಲಾಗಿದೆ.

ಹೋಮಿಯೋಪಥಿಕ್ ವಿದ್ಯಾರ್ಥಿಗಳ ಹೋರಾಟ :

ಬೆಳಗಾವಿಯಲ್ಲಿ ಶ್ರೀ ಎ. ಎಮ್. ಶೇಕ್ ಅವರು ಛೇರ್‌ಮನ್ ಆಗಿರುವ ಪೀಪಲ್ಸ್ ಎಜುಕೇಶನ್ ಸೊಸೈಟಿ ಎಂಬ ಸಂಸ್ಥೆಯ ಹೋಮಿಯೋಪಥಿಕ್ ವಿದ್ಯಾರ್ಥಿಗಳು ಕಳೆದ ಕೆಲವು ತಿಂಗಳುಗಳಿಂದ ಹೋರಾಟದ ಪಥದಲ್ಲಿರುವರು. ಇಲ್ಲಿ 5ವರ್ಷದ ಪದವಿ ವ್ಯಾಸಂಗಕ್ಕೆ ರೂ 10ರಿಂದ15 ಸಹಸ್ರ ಮತ್ತು 4ವರ್ಷಗಳ ಸರ್ಟಿಫಿಕೇಟ್ ಕೋರ್ಸ್ ವ್ಯಾಸಂಗಕ್ಕೆ ರೂ. 5ರಿಂದ7½ ಸಹಸ್ರ ಡೊನೇಷನ್ ಕೊಡಬೇಕು. ವರ್ಷಕ್ಕೆ ಸುಮಾರು 7ಲಕ್ಷ ರೂಪಾಯಿಗಳಷ್ಟು ಆದಾಯ ಕಾಲೇಜು ಫೀಸಿನಿಂದಲೇ ಬರುವುದಿದ್ದರೂ, ಕಾಲೇಜು ವ್ಯವಸ್ಥೆ ಕುರಿಮಂದೆಗಳನ್ನಿಡುವ ಶೆಡ್ಡಿಗಿಂತಲೂ ಕೆಟ್ಟದ್ದಿದೆ. ಪ್ರಾಧ್ಯಾಪಕರಿಗೆ ಮಾಸಕ್ಕೆ ರೂ. 300ರಿಂದ ರೂ.500 ರಷ್ಟು ವೇತನವಿದ್ದರೆ, ನೌಕರರಿಗೆ ರೂ 150ರಿಂದ ರೂ. 250 ಇದೆ. ಎಲ್ಲರನ್ನೂ ತಾತ್ಕಾಲಿಕವಾಗಿ ಕೆಲಸಕ್ಕೆ ಹಚ್ಚಿಕೊಳ್ಳಲಾಗುತ್ತಿದೆ.

ಕಾಲೇಜಿನ ಅವ್ಯವಸ್ಥೆ ಮತ್ತು ವಿದ್ಯಾರ್ಥಿಗಳ ಶೋಷಣೆಯನ್ನು ಪ್ರತಿಭಟಿಸಿ ಮತ್ತು ಕಾಲೇಜನ್ನು ಸರಕಾರವೇ ವಹಿಸಿಕೊಳ್ಳಬೇಕೆಂಬ ಬೇಡಿಕೆಯನ್ನು ಮುಂದಿಟ್ಟು 1980 ಜನವರಿ 28ರಿಂದ 30ರ ತನಕ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದರು. ಮುಷ್ಕರ ಪ್ರಾರಂಭಿಸಿದರು. 4-2-80 ರಂದು ಮೇನೇಜುಮೆಂಟ್ ಬೀಗಮುದ್ರೆ ಸಾರಿತು. ಸರಕಾರವು ಏನೇನೂ ಕ್ರಮವಹಿಸದ್ದನ್ನು ಕಂಡು 20-2-80 ರಿಂದ ವಿದ್ಯಾರ್ಥಿಗಳು ಸರದಿ ಅನ್ನ ಸತ್ಯಾಗ್ರಹ ಪ್ರಾರಂಭಿಸಿದರು; ಮೇ 6 ರಿಂದ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಪ್ರಾರಂಭವಾಯಿತು. ರಾಜ್ಯ ಆರೋಗ್ಯ ಸಚಿವರು ಕೊಟ್ಟ ಆಶ್ವಾಸನೆಯನ್ನು ಗಮನಿಸಿ ಡಾ ವಿಶ್ವನಾಥ್ ಅವರ ನೇತೃತ್ವದಲ್ಲಿ ನಡೆಯುತ್ತಲಿದ್ದ ಆಮರಣ ಉಪವಾಸ ಸತ್ಯಾಗ್ರಹವನ್ನು 14ರಂದು ಮಧ್ಯರಾತ್ರಿಗೆ ನಿಲ್ಲಿಸಿ, ಆಮೇಲೆ ಸರದಿ ಉಪವಾಸ ಸತ್ಯಾಗ್ರಹ ನಡೆಯುತ್ತಲಿದೆ. ಬೇಡಿಕೆಗಳು ಈಡೇರುವ ತನಕ ಹೋರಾಡುವ ಅಚಲ ವಿಶ್ವಾಸವು ವಿದ್ಯಾರ್ಥಿಗಳಲ್ಲಿದೆ. ○

ರಾಜ್ಯವ್ಯಾಪ್ತಿ ಚಳುವಳಿಗೆ ಸಿ.ಐ.ಟಿ.ಯು. ಕರೆ

(ಒಂದನೇ ಪುಟದಿಂದ)

ಶೇ. 71ಮತಗಳನ್ನು ಕೊಟ್ಟು ತಮ್ಮ ಪ್ರಾತಿನಿಧಿಕ ಸಂಘವಾಗಿ ಸಿ ಐ. ಟಿ.ಯು ವಿನ ವೈಸೂರು ವೈನ್ ವರ್ಕರ್ಸ್ ಯೂನಿಯನನ್ನು ಚುನಾಯಿಸಿದ ಕೋಲಾರದ ಚಿನ್ನದಗಣಿ ಕಾರ್ಮಿಕರನ್ನು ಅಭಿನಂದಿಸುವ ನಿರ್ಣಯವೊಂದನ್ನು ಅಂಗೀಕರಿಸಿದ ಸಭೆಯು ಕೂಡಲೇ ಆಡಳಿತ ಮಂಡಳಿಯನ್ನು ಮತ್ತು ಕೇಂದ್ರ ಸರಕಾರವನ್ನು ಆಗ್ರಹಪಡಿಸಿತು

ಬೆಂಗಳೂರಿನ ಐ. ಟಿ. ಸಿ. ಕಾರ್ಮಿಕರ ಮುಷ್ಕರವನ್ನು, ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಏಕಸ್ವಾಮ್ಯಸ್ಥ ಬಂಡವಾಳಗಾರ ಭಾಂಗೂರು ಒಡೆತನದಲ್ಲಿರುವ ಸಂಸೆ ಟೀ ತೋಟದ ಕಾರ್ಮಿಕರು ನಡೆಸುತ್ತಿರುವ ಮುಷ್ಕರವನ್ನು, ಲೋಕೋಪಯೋಗಿ ಇಲಾಖೆಯ ಕೆಲಸಗಾರರು ನಡೆಸುತ್ತಿರುವ ಮುಷ್ಕರವನ್ನು (ಚಳುವಳಿಯನ್ನು), ಬೆಳಗಾವಿ, ಬಿಜಾಪುರ ಜಿಲ್ಲೆಗಳಲ್ಲಿ ಮತ್ತು ಇತರೆ ಕಡೆಯ ಪವರ್‌ಲೂಂ ಕಾರ್ಮಿಕರು ನಡೆಸುತ್ತಿರುವ ಹೋರಾಟವನ್ನು, ಬಹುರಾಷ್ಟ್ರೀಯ ಕಂಪೆನಿಯು ಹೇರಿರುವ ನ್ಯಾಯಬಾಹಿರ ಬೀಗಮುದ್ರೆಯ ವಿರುದ್ಧ ಸೆಣಸುತ್ತಿರುವ ಬೆಳಗಾವಿಯ ಇಂಡಾಲ್ ಕಾರ್ಮಿಕರನ್ನು ಸಂಪೂರ್ಣವಾಗಿ ಬೆಂಬಲಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಕನ್ನಡವನ್ನು ಕಡೆಗಣಿಸಿ ಸಂಸ್ಕೃತವನ್ನು ಪ್ರಥಮ ಭಾಷೆಯನ್ನಾಗಿ ಮಾಡಲು ಉದ್ದೇಶಿಸಿರುವ ಸರ್ಕಾರದ ಕ್ರಮವನ್ನು ಖಂಡಿಸಿ, ಕಾರ್ಮಿಕ ಇಲಾಖೆಯಲ್ಲಿ ಎಲ್ಲಾ ಹಂತಗಳಲ್ಲೂ ಕನ್ನಡ ಭಾಷೆಯನ್ನೇ ಬಳಸಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು,

○

ಸಂಪಾದಕೀಯ

(ಒಂದನೇ ಪುಟದಿಂದ)

ಬಹುಗುಣರವರು ಲೋಕಸಭೆಗೂ ರಾಜಿನಾಮೆ ನೀಡಿರುವುದು ಸ್ವಾಗತಾರ್ಹವಾಗಿದೆ ಆದರೆ ಈದಿನ ಪರಿಸ್ಥಿತಿಯಲ್ಲಿ ಬದಲಾವಣೆ ತರಬೇಕಾದರೆ ಆಳುವ ವರ್ಗಗಳು ಅನುಸರಿಸುತ್ತಿರುವ ಧೋರಣೆಯನ್ನು ಸೋಲಿಸುವುದಗತ್ಯ. ದೇಶದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಸ್ಥಾಪಿತಹಿತಾಸಕ್ತಿಗಳನ್ನೆದುರಿಸುವ ಕಾರ್ಯಕ್ರಮದ ಆಧಾರದಲ್ಲಿ ಐಕ್ಯತೆ ಬೆಳೆಯಬೇಕು.

ಬಹುಗುಣರ ರಾಜಿನಾಮೆಯು ಕಾಂಗ್ರೆಯ ದಿವಾಳಿಕೋರ ನೀತಿ ಮತ್ತು ಸರ್ವಾಧಿಕಾರಿ ಬಣ್ಣವನ್ನು ಬಯಲಿಗೆಳೆದಿದೆ, ಅದು ಸ್ವಾಗತಾರ್ಹವಾದುದು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT